₹4 । ಸಂಪುಟ 4 । ಸಂಚಿಕೆ 43 । ಪುಟ 4 । RNI: KARKAN/2020/79084

ಪ್ರಧಾನ ಸಂಪಾದಕರು : ಸತೀಶ್. ಬಿ. ಜಿ

ಬೆಳಗಾವಿ ಮತ್ತು ಬೆಂಗಳೂರಿನಿಂದ ಏಕ ಕಾಲದಲ್ಲಿ ಪ್ರಕಟಿತ

# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

9900332089 | newsbelagavi@gmail.com | Regn.No: G-2/PMG/KA/NK/BM/139/2021-23 | Thursday, 30 MARCH 2023 | BELAGAVI VARADI KANNADA DAILY

# ಮೇ 10ರಂದು ಮತದಾನ, ಮೇ 13 ಫಲಿತಾಂಶ

## ನೀತಿ ಸಂಹಿತೆ ಜಾರಿ । ಒಂದೇ ಹಂತದಲ್ಲಿ ಚುನಾವಣೆ

**ಚುನಾವಣೆ ವೇಳಾ ಪಟ್ಟಿ**

| | |
|---|---|
| ಚುನಾವಣೆ ಅಧಿಸೂಚಣೆ | ಏಪ್ರಿಲ್ 13 |
| ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ | ಏಪ್ರಿಲ್ 20 |
| ನಾಮಪತ್ರ ಪರಿಶೀಲನೆ | ಏಪ್ರಿಲ್ 21 |
| ನಾಮಪತ್ರ ಹಿಂಪಡೆಯುವ ಕೊನೆಯ ದಿನಾಂಕ | ಏಪ್ರಿಲ್ 24 |
| ಮತದಾನ | ಮೇ 10 |
| ಮತಗಳ ಏಣಿಕೆ | ಮೇ 13 |



- ಪುರುಷ ಮತದಾರರು **2.62.42.561**
- ಮಹಿಳಾ ಮತದಾರರು **2.59.26.319**
- ತೃತಿಯ ಲಿಂಗಿ ಮತದಾರರು **4699**

ನವದೆಹಲಿ: ಕೇಂದ್ರ ಚುನಾವಣಾ ಆಯೋಗವು ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣಾ ದಿನಾಂಕವನ್ನು ಘೋಷಣೆ ಮಾಡಿದೆ. ಇಂದು ಚುನಾವಣಾ ದಿನಾಂಕ ಘೋಷಣೆಯಾಗಿದ್ದು, ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಮೇ10 ರಂದು ಮತದಾನ ನಡೆಯಲಿದ್ದು, ಮೇ 13 ರಂದು ಮತ ಎಣಿಕೆ ನಡೆಯಲಿದೆ. ಇನ್ನು ಈಗಿನಿಂದಲೇ ನೀತಿ ಸಂಹಿತೆ ಜಾರಿಯಾಗಲಿದೆ ಎಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ದೆಹಲಿಯ ವಿಜ್ಞಾನ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ರಾಜ್ಯದಲ್ಲಿ ಇಂದಿನಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿ ಮಾಡಿದ್ದಾರೆ.

ರಾಜ್ಯದ 224 ಕ್ಷೇತ್ರಗಳಿಗೆ ಒಂದೇ ಹಂತದಲ್ಲೇ ಮತದಾನ ನಡೆಯಲಿದೆ. ಏಪ್ರಿಲ್ 13ರಂದು ಅಧಿಸೂಚನೆ ಪ್ರಕಟಗೊಳ್ಳಲಿದೆ. ಏಪ್ರಿಲ್ 20ರಂದು ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ. ಏಪ್ರಿಲ್ 21ರಂದು ನಾಮಪತ್ರಗಳ ಪರಿಶೀಲನೆ ನಡೆಯುತ್ತೆ. ಏಪ್ರಿಲ್ 24ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನ. ಮೇ 10ರ ಬುಧವಾರದಂದು 224 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದ್ದು ಮೇ 13ರ ಶನಿವಾರದಂದು ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿದೆ. ಮೇ 15ರೊಳಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದೆ.

ಕರ್ನಾಟಕ ರಾಜ್ಯ ವಿಧಾನ ಸಭೆ ಚುನಾವಣೆಯ ಎಲ್ಲ ಪ್ರಕ್ರಿಯೆಗಳು ಮೇ. 23ರೊಳಗೆ ಮುಗಿದು ಹೊಸ ಸರಕಾರ ಅಧಿಕಾರಕ್ಕೆ ಬರಬೇಕಿದೆ. ರಾಜ್ಯದಲ್ಲಿ ಒಟ್ಟು ಮತದಾರರು, 5ಕೋಟಿ 21 ಲಕ್ಷ. ಇದರಲ್ಲಿ 2 ಕೋಟಿ 59 ಲಕ್ಷ ಮಹಿಳಾ ಮತದಾರರಿದ್ದಾರೆ.

80 ವರ್ಷ ಮೇಲ್ಪಟ್ಟವರಿಗೆ ಹಾಗೂ ವಿಕಲ ಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಈ ಬಾರಿ ಅವಕಾಶ ಕಲ್ಪಿಸಲಾಗಿದೆ. ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆಯಲು ಉತ್ತೇಜಿಸಲಾಗಿದೆ ಎಂದರು.

ಚುನಾವಣಾ ಅಕ್ರಮ ತಡೆಯಲು 2,400 ವಿಚಕ್ಷಣ ತಂಡ ನಿಯೋಜನೆ ಮಾಡಲಾಗಿದೆ. ಅಕ್ರಮಗಳ ಮೇಲೆ ನಿಗಾವಹಿಸಲು 2016 ಫ್ಲೈಯಿಂಗ್ ಸ್ಕ್ವಾಡ್ ನಿಯೋಜಿಸಲಾಗಿದ್ದು ಎಲ್ಲಾ ವಿಮಾನ ನಿಲ್ದಾಣ, ಬಂದರು, ಹೆದ್ದಾರಿಗಳಲ್ಲಿ ಹದ್ದಿನಕಣ್ಣು ಇಡಲಿದೆ. ಎಲ್ಲಾ ನಗರ, ಜಿಲ್ಲಾ ಕೇಂದ್ರಗಳ ಗೋದಾಮುಗಳ ಮೇಲೆ ನಿಗಾ ಇಡಲಾಗುತ್ತೆ. ಬ್ಯಾಂಕ್ ವಹಿವಾಟಿನ ಮೇಲೆ ಚುನಾವಣಾ ಆಯೋಗ ನಿಗಾ ಇಡಲಿದೆ. ಹಣದ ವ್ಯವಹಾರ, ಮದ್ಯ ಸಾಗಣೆ ಮೇಲೆ ನಿಗಾ ವಹಿಸಲಾಗುವುದು. ಮತದಾರರಿಗೆ ಗಿಫ್ಟ್ ಹಂಚಿಕೆ, ಹಣ ಹಂಚುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತೆ. ಮತದಾರರಿಗೆ ಆಮಿಷವೊಡ್ಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಕಲಾಗುತ್ತೆ ಎಂದು ತಿಳಿಸಿದರು.

ರಾಜ್ಯದಲ್ಲಿ ಒಟ್ಟು 58,282 ಮತಗಟ್ಟೆಗಳು ಇರಲಿವೆ. ಒಂದು ಮತಗಟ್ಟೆಯಲ್ಲಿ 883 ಜನ ಮತ ಹಾಕಬಹುದಾಗಿದೆ. ನಗರ ಪ್ರದೇಶಗಳಲ್ಲಿ 24,063 ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 34,219 ಮತಗಟ್ಟೆಗಳು ಇರಲಿವೆ. ಹಾಗೇ ಎಲ್ಲಾ ಮತಗಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳು ಇರುವಂತೆ ನೋಡಿಕೊಳ್ಳಲಾಗುವುದು. ಅಂಗವಿಕಲ–ರಿಗೆ ವ್ಹೀಲ್ಚೇರ್ ವ್ಯವಸ್ಥೆ ಇರಲಿದೆ.

## ಚುನಾವಣೆ ಎದುರಿಸಲು ಬಿಜೆಪಿ ಸದಾ ಸಿದ್ಧ: ಸಿಎಂ ಬೊಮ್ಮಾಯಿ



ಬೆಂಗಳೂರು: ಮೇ 10 ರಂದು ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಬಿಜೆಪಿ ಚುನಾವಣೆಗೆ ಎದುರಿಸಲು "ಸದಾ ಸಿದ್ಧವಾಗಿದೆ" ಎಂದು ಬುಧವಾರ ಹೇಳಿದ್ದಾರೆ.

ಚುನಾವಣೆ ದಿನಾಂಕ ಘೋಷಣೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ನಮ್ಮ ಸರ್ಕಾರ ಮಾಡಿರುವ ಅಭಿವೃದ್ಧಿ ಕೆಲಸಗಳ ಆಧಾರದ ಮೇಲೆ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ಬಿಜೆಪಿ ಪ್ರಬಲ ಸಂಘಟನೆಯೊಂದಿಗೆ ಚುನಾವಣೆಗೆ ಸದಾ ಸಿದ್ಧವಾಗಿರುವ ಪಕ್ಷವಾಗಿದೆ ಮತ್ತು ನಾವು ಚುನಾವಣೆಗೆ ಸನ್ನದ್ಧರಾಗಿದ್ದೇವೆ. ನಾವು ಸಾಕಷ್ಟು ಪ್ರಚಾರ ಮಾಡಿದ್ದೇವೆ. ಜನರ ಪ್ರತಿಕ್ರಿಯೆ ಅದ್ಭುತವಾಗಿದೆ. ಡಬಲ್ ಇಂಜಿನ್ ಸರ್ಕಾರ ಮೂಲಸೌಕರ್ಯ ಮತ್ತು ಇತರ ವಿಷಯಗಳಲ್ಲಿ ಉತ್ತಮ ಕೆಲಸ ಮಾಡಿದೆ. ಮೇ 13 ರಂದು ಬಿಜೆಪಿ ಸಂಪೂರ್ಣ ಬಹುಮತ ಪಡೆಯುವುದು ಖಚಿತ ಎಂದು ಸಿಎಂ ಹೇಳಿದರು.

ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ, ಒಳಮೀಸಲಾತಿ, ನೆನೆಗುದಿಗೆ ಬಿದ್ದ ಸಮಸ್ಯೆಗಳಿಗೆ ಪರಿಹಾರ, ಒಬಿಸಿ ಯಲ್ಲಿ ಬದಲಾವಣೆ ಜನಮಾನಸದಲ್ಲಿ ಪಕ್ಷ ಹಾಗೂ ಸರ್ಕಾರದ ಪರವಾಗಿ ಜನತಾ ಜನಾರ್ದನ ಇದೆ. ಈ ಬಾರಿ ನಮ್ಮ ಕೆಲಸಗಳ ಆಧಾರದ ಮೇಲೆ ಸಕಾರಾತ್ಮಕ ತೀರ್ಪನ್ನು ಕೇಳುತ್ತಿದ್ದೇವೆ. ಜನರ ಆಶೀರ್ವಾದ ನಮ್ಮ ಪರವಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

## ರಾಹುಲ್ ಗಾಂಧಿ ಅನರ್ಹತೆ ವಿಚಾರ

## ಅಸ್ಸಾಂ ನ 3 ಶಾಸಕರ ಅಮಾನತು




ಗುವಾಹಟಿ: ಲೋಕಸಭಾ ಸದಸ್ಯತ್ವದಿಂದ ರಾಹುಲ್ ಗಾಂಧಿ ಅನರ್ಹಗೊಂಡಿರುವ ವಿಚಾರ ಅಸ್ಸಾಂ ನ ವಿಧಾನಸಭೆಯಲ್ಲೂ ಸದ್ದು ಮಾಡಿದ್ದು, 3 ಶಾಸಕರು ಅಮಾನತುಗೊಂಡಿದ್ದಾರೆ.

ರಾಹುಲ್ ಅನರ್ಹತೆಯ ವಿಚಾರವಾಗಿ ಚರ್ಚಿಸಲು ಅಸ್ಸಾಮ್ ನ ವಿಧಾನಸಭೆಯಲ್ಲಿ ಕಾಂಗ್ರೆಸ್ ನಿರ್ಣಯ ಮಂಡಿಸಿತ್ತು. ಈ ಚಾರವಾಗಿ ಗದ್ದಲ ಉಂಟಾದ ಪರಿಣಾಮ ಸ್ಪೀಕರ್ ಬಿಸ್ವಜಿತ್ ಡೈಮರಿ ಎರಡು ಬಾರಿ ಸದನದ ಕಲಾಪವನ್ನು ಮುಂದೂಡಿ, ಇಬ್ಬರು ಕಾಂಗ್ರೆಸ್ ಶಾಸಕರು ಹಾಗೂ ಓರ್ವ ಪಕ್ಷೇತರ ಶಾಸಕಕನ್ನು ಅಮಾನತುಗೊಳಿಸಿದರು.

ಪ್ರಶ್ನೋತ್ತರ ಕಲಾಪ ಆರಂಭದ ಬಳಿಕ ಡೈಮರಿ ವಿಪಕ್ಷ ನಾಯಕ ದೇಬಬ್ರತಾ ಸೈಕಿಯಾ ಅವರಿಗೆ ಮಾತನಾಡಲು ಅವಕಾಶ ನೀಡಲಾಯಿತು.

ವಿಪಕ್ಷ ನಾಯಕ ಮಂಡಿಸಿದ ನಿರ್ಣಯದ ಬಗ್ಗೆ ಸಿಎಂ ಬಿಸ್ವ ಶರ್ಮಾ ಪ್ರತಿಕ್ರಿಯೆ ನೀಡಿದ್ದು, ನಾವು ನ್ಯಾಯಾಂಗದ ಬಗ್ಗೆ ಇಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು ಹಿಂದೆಂದೂ ನಡೆಯದಿರುವ ಘಟನೆಯಾಗಿದೆ. ವಿಧಾನಸಭೆಯಲ್ಲಿ ಗದ್ದಲ ಉಂಟುಮಾಡಲು ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂಬುದು ನನಗೆ ತಿಳಿದಿದೆ ಎಂದು ಹೇಳಿದ್ದಾರೆ.

ಈ ಹೇಳಿಕೆ ನೀಡುತ್ತಿದ್ದಂತೆಯೇ ಕಾಂಗ್ರೆಸ್ ಶಾಸಕರು ಗದ್ದಲ ಉಂಟುಮಾಡಲು ಪ್ರಾರಂಭಿಸಿದರು. ಗದ್ದಲ ತೀವ್ರಗೊಂಡ ಹಿನ್ನೆಲೆಯಲ್ಲಿ ಸಭಾಧ್ಯಕ್ಷರು 3 ಶಾಸಕರನ್ನು ಅಮಾನತುಗೊಳಿಸಿದರು.

## ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ವಿರುದ್ಧ ಬಿಜೆಪಿ ದೂರು



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧ ವಿವಾದಾತ್ಮಕ ಹೇಳಿಕೆ ಹಿನ್ನೆಲೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಿರುದ್ಧ ಬಿಜೆಪಿ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದೆ. ಇತ್ತೀಚಿಗೆ ಸುರ್ಜೇವಾಲ ಸಿಎಂ ಬೊಮ್ಮಾಯಿ ಅವರನ್ನು ಆಧುನಿಕ ಶಕುನಿ ಎಂದು ಕರೆದಿದ್ದರು. ಬೊಮ್ಮಾಯಿ ಮೀಸಲಾತಿ ಮೂಲಕ ಸಮಾಜವನ್ನು ವಿಭಜಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಈ ಹೇಳಿಕೆ ಹಿನ್ನೆಲೆಯಲ್ಲಿ ಬಿಜೆಪಿ ಕಾನೂನು ಪ್ರಕೋಷ್ಠದ ವತಿಯಿಂದ ಮಂಗಳವಾರ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಬೊಮ್ಮಾಯಿ ಅವರ ಘನತೆಗೆ ಧಕ್ಕೆ ತಂದಿರುವ ಸುರ್ಜೇವಾಲ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಲಾಗಿದೆ. ತಿರುಮಲ ತಿರುಪತಿ ದೇವಸ್ಥಾನಕ್ಕೆ ಆರ್‌ಬಿಐ ನಿಂದ ದಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಇದರ ಹಿಂದೆ ಬಿಜೆಪಿ ಕೈವಾಡ ಎಂಬ ಸುರ್ಜೇವಾಲ ಆರೋಪ ಮಾಡಿದ್ದರು. ಈ ಬಗ್ಗೆಯೂ ಸುರ್ಜೇವಾಲ ವಿರುದ್ಧ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ಸಲ್ಲಿಸಿದೆ. ಸಮಾಜದಲ್ಲಿ ಕೋಮು ಸೌಹಾರ್ದತೆ ಕದಡಲು ಸುರ್ಜೇವಾಲಾ ಪ್ರಯತ್ನಿಸುತ್ತಿದ್ದಾರೆ. ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಸುರ್ಜೇವಾಲಾ ಮತದಾರರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರಿನ ಬಳಿಕ ಮಾತನಾಡಿದ ವಿಧಾನಪರಿಷತ್ ಬಿಜೆಪಿ ಸದಸ್ಯ ಛಲವಾದಿ ನಾರಾಯಣ ಸ್ವಾಮಿ, ರಣದೀಪ್ ಸುರ್ಜೆವಾಲಾ ಯಾವ ಮಾತನ್ನು ಆಡಿದರೂ ಅದು ಅಸಂಬದ್ಧ, ಅಸಂವಿಧಾನಿಕ, ನೀವು ಸಿಎಂಗೆ ಶಕುನಿ ಅಂದ್ರೆ ನಾವು ನಿಮ್ಮನ್ನು ಶಿಖಂಡಿ ಅಂತೀವಿ. ಈ ರೀತಿ ಕೆಟ್ಟ ಪದ ಬಳಕೆ ಸರಿಯಲ್ಲ ಎಂದರು.



## ಕರ್ನಾಟಕದ ಎಲ್ಲಾ ಕ್ಷೇತ್ರಗಳಲ್ಲೂ ಆಮ್ ಆದ್ಮಿ ಪಕ್ಷ ಸ್ಪರ್ಧಿಸಲಿದೆ: ಅರವಿಂದ್ ಕೇಜ್ರಿವಾಲ್

ನವದೆಹಲಿ: ರಾಜ್ಯ ವಿಧಾನಸಭೆ ಚುನಾವಣೆಗೆ ಬುಧವಾರ ಮುಹೂರ್ತ ಫಿಕ್ಸ್ ಆಗಿದ್ದು, ಕರ್ನಾಟಕದ ಎಲ್ಲಾ ಕ್ಷೇತ್ರಗಳಲ್ಲೂ ಆಮ್ ಆದ್ಮಿ ಪಕ್ಷ(ಎಎಪಿ) ಸ್ಪರ್ಧಿಸಲಿದೆ ಎಂದು ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಹೇಳಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಎಎಪಿ ಭರ್ಜರಿ ಸಿದ್ಧತೆ ನಡೆಸಿದ್ದು, ಈಗಾಗಲೇ ತನ್ನ 80 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಅಲ್ಲದೆ ವಿಧಾನಸಭೆ ಚುನಾವಣೆಗೆ ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ



ಬೆಂಗಳೂರು :ಈ ಬಾರಿಯೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆ ಗುಡ್ ನ್ಯೂಸ್ ನೀಡಿದೆ. ಇದೇ 31 ರಿಂದ ಎಸ್‌ಎಸ್–ಎಲ್‌ಸಿ ಪರೀಕ್ಷೆ ಪ್ರಾರಂಭವಾಗಲಿದ್ದು, ಪರೀಕ್ಷಾ ತಯಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಖಖಐಅ ಬೋರ್ಡ್ ನಿರ್ದೇಶಕ ರಾಮಚಂದ್ರ ಹೇಳಿದ್ದಾರೆ.

ಇದರ ಜೊತೆಗೆ ಈ ಬಾರಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಮಂಡಳಿ ಗುಡ್ ನ್ಯೂಸ್ ನೀಡಿದೆ. ಕೊರೊನಾ ಬ್ಯಾಚ್ ಎಂದು ಪರಿಗಣಿಸಿ ಶೇ.10% ರಷ್ಟು ಗ್ರೇಸ್ ಅಂಕ ನೀಡುವುದಾಗಿ ಬೋರ್ಡ್ ತಿಳಿಸಿದೆ.ಮೂರು ವಿಷಯಗಳಿಗೆ ಮಾತ್ರ ಗ್ರೇಸ್ ಮಾರ್ಕ್ ಅಂಕ ನೀಡಲು ಬೋರ್ಡ್ ಮುಂದಾಗಿದೆ. ಭಾಷಾ ಹಾಗೂ ಕೋರ್ ವಿಷಯಗಳಿಗೆ ಮಾತ್ರ ಗ್ರೇಸ್ ಅಂಕ ಕೊಡಲಾಗುತ್ತದೆ. ತೇರ್ಗಡೆ ಕಡಿಮೆ ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಇದು ಅನ್ವಯವಾಗಲಿದೆ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಕಳೆದ ಎರಡು ವರುಷದಿಂದ ಕೊರೊನಾ ಕಾರಣಕ್ಕೆ ಶೇ.10 ರಷ್ಟು ಗ್ರೇಸ್ ಮಾರ್ಕ್ಸ ನೀಡಲಾಗಿತ್ತು.ಅದನ್ನು ಈ ವರ್ಷವೂ ಮುಂದುವರಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 8, 9ನೇ ತರಗತಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯದೆ ತೇರ್ಗಡೆ ಹೊಂದಿದ ಕಾರಣ ಈ ವರ್ಷವೂ ಶೇ.10ರಷ್ಟು ಗ್ರೇಸ್ ಮಾರ್ಕ್ಸ ನೀಡಲು ಬೋರ್ಡ್ ನಿರ್ಧಾರ ತೆಗೆದುಕೊಂಡಿದೆ.

ಖಖಐಅ ಪರೀಕ್ಷಾ ಕಾರ್ಯ ಪೂರ್ಣ ಗೊಳಿಸಿದ ಬೋರ್ಡ: ಮಾರ್ಚ್ 31 ರಿಂದ ಎಸ್ ಎಸ್ ಎಲ್ ಸಿ ಪರೀಕ್ಷೆ ಪ್ರಾರಂಭವಾಗುತ್ತಿದೆ. ಮಾ. 31ರಿಂದ ಏ. 15ರ ವರೆಗೆ ಈ ಭಾರಿ ಪರೀಕ್ಷೆ ನಡೆಯಲಿದೆ. ಈ ಬಾರಿ ಒಟ್ಟು 8.42 ಲಕ್ಷ ವಿದ್ಯಾರ್ಥಿಗಳು ಬರೆಯಲಿದ್ದಾರೆ ಎಂದು ಎಸ್.ಎಸ್.ಎಲ್.ಸಿ ಬೋರ್ಡ್ ನಿರ್ದೇಶಕ ರಾಮಚಂದ್ರ ಹೇಳಿದ್ದಾರೆ.ರಾಜ್ಯಾದ್ಯಂತ ಒಟ್ಟು 3305 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಈ ಬಾರಿ ಚುನಾವಣೆ ಇರುವುದರಿಂದ ಪೊಲೀಸ್ ಬಂದೋಬಸ್ತ್ ಮಾಡಲು ಜಿಲ್ಲಾಧಿಕಾರಿ, ಜಿಲ್ಲಾ ಎಸ್ಪಿಗೆ ಮೊದಲೇ ಸೂಚನೆ ಕೊಡಲಾಗಿದೆ ಎಂದು ಪರೀಕ್ಷಾ ಮಂಡಳಿ ನಿರ್ದೇಶಕ ರಾಮಚಂದ್ರ ಹೇಳಿದ್ದಾರೆ. ಪರೀಕ್ಷಾ ಅಕ್ರಮ ತಡೆಯಲು ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಲಾಗಿದ್ದು ಊಹಾಪೋಹಗಳಿಗೆ ಪೋಷಕರು ಹಾಗೂ ವಿದ್ಯಾರ್ಥಿಗಳು ಕಿವಿಕೊಡದಂತೆ ಬೋರ್ಡ್ ಮನವಿ ಮಾಡಿಕೊಂಡಿದೆ.

## ಹೊರಗಿನವರಿಗೆ ಟಿಕೆಟ್ ನೀಡಿದರೆ ಸಾಮೂಹಿಕವಾಗಿ ರಾಜೀನಾಮೆ

### ಶಿವಮೊಗ್ಗ ಕಾಂಗ್ರೆಸ್ ವಾರ್ಡ್ ಅಧ್ಯಕ್ಷರ ಎಚ್ಚರಿಕೆ



ಶಿವಮೊಗ್ಗ: ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಹೊರಗಿನವರಿಗೆ ಟಿಕೆಟ್ ನೀಡಿದರೆ ಸಾಮೂಹಿಕವಾಗಿ ರಾಜೀನಾಮೆ ನೀಡುವುದಾಗಿ ಶಿವಮೊಗ್ಗದ ವಿವಿಧ ವಾರ್ಡ್ಗಳ ಅಧ್ಯಕ್ಷರು ಎಚ್ಚರಿಕೆ ನೀಡಿದ್ದಾರೆ.

ಈಗಾಗಲೇ ಕಾಂಗ್ರೆಸ್ ಪಕ್ಷ ವಿಧಾನಸಭಾ ಚುನಾವಣೆಗೆ ತನ್ನ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು ಎರಡನೇ ಪಟ್ಟಿಯ ಸಿದ್ಧತೆ ನಡೆದಿದೆ. ಹೀಗಿರುವಾಗಲೇ ಶಿವಮೊಗ್ಗದ ಕಾಂಗ್ರೆಸ್ ಪಕ್ಷದ ವಾರ್ಡ್ ಅಧ್ಯಕ್ಷರು ಸಭೆ ನಡೆಸಿದ್ದು, ಸಭೆಯಲ್ಲಿ ಹೊರಗಿನವರಿಗೆ ಟಿಕೆಟ್ ನೀಡದಂತೆ ಆಗ್ರಹಿಸಿದ್ದಾರೆ.

ಅಲ್ಲದೆ ಒಂದು ವೇಳೆ ಕ್ಷೇತ್ರದ ಹೊರಗಿನವರಿಗೆ ಟಿಕೆಟ್ ನೀಡಿದರು ತಾವು ಅವರಿಗಾಗಿ ಕೆಲಸ ಮಾಡುವುದಿಲ್ಲ.

ಅಲ್ಲದೆ ನಾವು ನಮ್ಮ ಸ್ಥಾನಗಳಿಗೆ ರಾಜಿನಾಮೆ ನೀಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತ ವಿಡಿಯೋ ಇದೀಗ ಸಾಮಾಜಿ–ಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಟಿಕೆಟ್ ಹಂಚಿಕೆ ಮಾಡುತ್ತಿರುವ ಕಾಂಗ್ರೆಸ್ ಹೈಕಮಾಂಡ್ ವಾರ್ಡ್ ಅಧ್ಯಕ್ಷ ಒತ್ತಾಯವನ್ನು ಹೇಗೆ ಸ್ವೀಕರಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

## ವರ್ಚುವಲ್ ಮೂಲಕ ಬೆಳಗಾವಿ FTO ಉದ್ಘಾಟನೆ



ನವದೆಹಲಿ :ಆತ್ಮನಿರ್ಭರ ಭಾರತ ಯೋಜನೆಯಡಿ ಬೆಳಗಾವಿಯಲ್ಲಿ ಬುಧವಾರ ಆರಂಭಿಸಲಾದ ಫ್ಲೈಯಿಂಗ್ ಟ್ರೇನಿಂಗ್ ಸಂಘಟನೆಯ ತರಬೇತಿಯನ್ನು ಕೇಂದ್ರ ವಿಮಾನಯಾನ ರಾಜ್ಯ ಸಚಿವ ಜನರಲ್ ವಿ. ಕೆ. ಸಿಂಗ್ ವರ್ಚುಲ್ ಮಿಡಿಯಾ ಮೂಲಕ ಇಂದು ಉದ್ಘಾಟಿಸಿದರು. ಕಮರ್ಷಿಯಲ್ ಪೈಲಟ್ ಲೈಸೆನ್ಸ್ (CPL) ಪಡೆಯ ಬಯಸುವ ಯುವ ಪೈಲಟ್ ಆಕಾಂಕ್ಷಿಗಳಿಗೆ ಅನುವಾಗುವ ತರಬೇತಿ ಬೆಳಗಾವಿಯಲ್ಲೇ ಲಭ್ಯವಾಗಲಿದೆ.


ಬೆಳಗಾವಿ ಸಂಸದೆ ಮಂಗಲಾ ಅಂಗಡಿ ಈ ಸಂದರ್ಭ ಮಾತನಾಡಿ ಬೆಳಗಾವಿ ಯುವಕರಿಗೆ ಕೇಂದ್ರ ವಿಮಾನಯಾನ ಸಚಿವಾಲಯದಿಂದ ಆತ್ಮ ನಿರ್ಭರ ಭಾರತ ಅಭಿಯಾನದಡಿ ಬೆಳಗಾವಿಯಲ್ಲಿ ತರಬೇತಿ ಕೊಡುವ ಕೆಲಸ ಶ್ಲಾಘನೀಯ ಎಂದು ಸಂಸದೆ ಮಂಗಲ ಸುರೇಶ ಅಂಗಡಿ ನುಡಿದರು.

ಮಾಜಿ ರೈಲ್ವೇ ಸಚಿವ ದಿ. ಶ್ರೀ ಸುರೇಶ ಅಂಗಡಿ ಅವರ ಕನಸು ನನಸು ಮಾಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ವಿಮಾನಯಾನ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಅವರಿಗೆ ಬೆಳಗಾವಿಯಲ್ಲಿ FTO( Flying Training Organization) ಆರಂಭಿಸಿದ್ದಕ್ಕಾಗಿ ಮಂಗಲಾ ಅಂಗಡಿ ಧನ್ಯವಾದ ಅರ್ಪಿಸಿದರು.

ಕೇಂದ್ರ ವಿಮಾನಯಾನ ಕಾರ್ಯದರ್ಶಿ ರಾಜೀವ್ ಬನ್ಸಲ್, ಜಂಟಿ ಕಾರ್ಯದರ್ಶಿ ಭೂಬಾ, ಉಪ ಕಾರ್ಯದರ್ಶಿ ಸೌರಭ ಉಪಸ್ಥಿತರಿದ್ದರು.

ವಿಮಾನ ಮರು ಆರಂಭಿಸಿ:ಬೆಳಗಾವಿ– ನವದೆಹಲಿ ಮತ್ತು ಇತರ ನಗರಗಳಿಗೆ ರದ್ದಾಗಿರುವ ವಿಮಾನ ಸೇವೆ ಆರಂಭಿಸಲು ಸಂಸದೆ ಮಂಗಲಾ ಅಂಗಡಿ ಕೋರಿದ್ದಾರೆ.

## ಸೈಬರ್ ವಂಚನೆ: 6 ಲಕ್ಷ ರೂ. ಪಂಗನಾಮ



ಮುಂಬೈ: ಸೈಬರ್ ವಂಚನೆಯಿಂದಾಗಿ ವಿದ್ಯಾರ್ಥಿನಿಯೊಬ್ಬರು 6 ಲಕ್ಷ ಹಣ ಕಳೆದುಕೊಂಡಿರುವ ಘಟನೆ ಮುಂಬೈನಲ್ಲಿ ವರದಿಯಾಗಿದೆ. ಬಾಂದ್ರಾ ಉಪನಗರದ 21 ವರ್ಷದ ಕಾಲೇಜು ವಿದ್ಯಾರ್ಥಿನಿಯೊಬ್ಬಳು ಸುಲಭ ಹಣದ ಆಮಿಷಕ್ಕೆ ಒಳಗಾಗಿ ಸೈಬರ್ ವಂಚಕರಿಂದ 6 ಲಕ್ಷಕ್ಕೂ ಹೆಚ್ಚು ಕಳೆದುಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಟೆಲಿಗ್ರಾಮ್ ಮೂಲಕ ವಿದ್ಯಾರ್ಥಿನಿಯನ್ನು ಸಂಪರ್ಕಿಸಿದ ನರೇನ್ಕುಮಾರ್ ಎಂಬಾತ ಚಲನಚಿತ್ರ ಸಂಬಂಧಿತ ವೆಬ್ಸೈಟ್ ಮೂಲಕ ಸುಲಭವಾಗಿ ಹಣ ಸಂಪಾದನೆ ಮಾಡಬಹುದು ಎಂದು ನಂಬಿಸಿದ್ದ. ದೂರುದಾರರು ಅವರ ಸೂಚನೆಗಳನ್ನು ಅನುಸರಿಸಿದ ನಂತರ ಅವರ ಬ್ಯಾಂಕ್ ಖಾತೆಗೆ ಸ್ವಲ್ಪ ಹಣವನ್ನು ಪಡೆದರು.

ಕೆಲವು ದಿನಗಳ ನಂತರ, ಮಹಿಳೆಯೊಬ್ಬರು ಅವಳೊಂದಿಗೆ ಸಂಪರ್ಕಕ್ಕೆ ಬಂದರು ಮತ್ತು ಅವಳು ಹಣವನ್ನು ಠೇವಣಿ ಮಾಡಿದರೆ ಮತ್ತು ತಾನು ಹಿಂದೆ ಮಾಡಿದ ಕೆಲಸವನ್ನು ಮಾಡಿದರೆ ಉತ್ತಮ ಆದಾಯವನ್ನು ಪಾವತಿಸಲು ಪ್ರಸ್ತಾಪಿಸಿದ್ದರು.

ಕಳೆದ ವಾರ ವಿದ್ಯಾರ್ಥಿ 6 ಲಕ್ಷಕ್ಕೂ ಹೆಚ್ಚು ಹಣ ಪಾವತಿಸಿದ್ದರೂ ನಿರೀಕ್ಷಿತ ಆದಾಯ ಬಂದಿರಲಿಲ್ಲ. ಪುರುಷ ಮತ್ತು ಮಹಿಳೆ ತನ್ನ ಸಂದೇಶಗಳಿಗೆ ಪ್ರತಿಕ್ರಿಯಿಸದಿದ್ದಾಗ, ವಿದ್ಯಾರ್ಥಿನಿ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಬಾಂದ್ರಾ ಪೊಲೀಸರು ಆರೋಪಿಗಳ ಪತ್ತೆಗೆ ಕಾರ್ಯಚರಣೆ ಆರಂಭಿಸಿದ್ದಾರೆ.


## ಕರ್ನಾಟಕಕ್ಕೆ 363 ಮಿಲಿಯನ್ ಡಾಲರ್ ಸಾಲ ಅನುಮೋದಿಸಿದ ವಿಶ್ವಬ್ಯಾಂಕ್

ಬೆಂಗಳೂರು: ವಿಶ್ವಬ್ಯಾಂಕ್‌ನ ಕಾರ್ಯನಿರ್ವಾಹಕ ಮಂಡಳಿಯು ಕರ್ನಾಟಕಕ್ಕೆ 363 ಮಿಲಿಯನ್ ಡಾಲರ್ ಸಾಲವನ್ನು ಅನುಮೋದಿಸಿದೆ. ಇದರಿಂದ ರಾಜ್ಯದ ಎರಡು ಮಿಲಿಯನ್ ಗ್ರಾಮೀಣ ಕುಟುಂಬಗಳಿಗೆ ಕೊಳವೆ ನೀರಿನ ಸಂಪರ್ಕದ ಮೂಲಕ ಅವರ ಮನೆಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಅನುಕೂಲವಾಗಲಿದೆ.

ಸುಮಾರು 77 ಪ್ರತಿಶತದಷ್ಟು ಕರ್ನಾಟಕವು ಶುಷ್ಕ ಅಥವಾ ಅರೆ ಶುಷ್ಕವಾಗಿದ್ದು, ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಅಸ್ಥಿರ ಮಳೆಯಿಂದಾಗಿ ಬರ ಮತ್ತು ಪ್ರವಾಹಗಳಿಗೆ ಗುರಿಯಾಗುತ್ತದೆ. ಅಂತರ್ಜಲ ಕುಸಿತ ಮತ್ತು ನೀರಿನ ಗುಣಮಟ್ಟ ಕ್ಷೀಣಿಸಲು ಕಾರಣವಾಗುತ್ತದೆ ಎಂದು ವಿಶ್ವ ಬ್ಯಾಂಕ್ ಹೇಳಿಕೆ ಬುಧವಾರ ತಿಳಿಸಿದೆ.

ಹೀಗಾಗಿ, ಕರ್ನಾಟಕ ಸುಸ್ಥಿರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯನ್ನು ಬೆಂಬಲಿಸುತ್ತದೆ. ಈ ಕಾರ್ಯಕ್ರಮವು ರಾಜ್ಯದ ಪ್ರತಿ ಗ್ರಾಮೀಣ ಮನೆಗಳಿಗೆ ಟ್ಯಾಪ್ ನೀರಿನ ಸಂಪರ್ಕವನ್ನು ನೀಡುತ್ತದೆ' ಎಂದು ಅದು ಹೇಳಿದೆ.

ಇದು ಕುಡಿಯುವ ನೀರಿನ ವಿತರಣಾ ಜಾಲದ ನಿರ್ಮಾಣ ಮತ್ತು ಗ್ರಾಮೀಣ ಮನೆಗಳಲ್ಲಿ ನೀರಿನ ಮೀಟರ್‌ಗಳನ್ನು ಅಳವಡಿಸುವುದನ್ನು ಒಳಗೊಂಡಿರುತ್ತದೆ.



ಅಲ್ಲದೆ, ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಸುಮಾರು 10 ಮಿಲಿಯನ್ ಜನರಿಗೆ ಪ್ರಯೋಜನವನ್ನು ನೀಡುತ್ತದೆ ಎಂದಿದೆ.

ಲಿಂಗ ಸಮಾನತೆಯು ಜಾಗತಿಕವಾಗಿ ಒಂದು ಪ್ರಮುಖ ವಿಷಯವಾಗಿದೆ. ಎಲ್ಲಾ ಗ್ರಾಮೀಣ ಮನೆಗಳಿಗೆ ಕೊಳವೆ ನೀರನ್ನು ಒದಗಿಸುವ ಭಾರತದ ಪ್ರಯತ್ನಗಳನ್ನು ಬೆಂಬಲಿಸಲು ವಿಶ್ವಬ್ಯಾಂಕ್‌ನ ಬದ್ಧತೆಯು ಈ ಸಮಸ್ಯೆಯನ್ನು ಪರಿಹರಿಸುವ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸುವ ಪ್ರಮುಖ ಹೆಜ್ಜೆಯಾಗಿದೆ ಎಂದು ವಿಶ್ವಬ್ಯಾಂಕ್‌ನ ಭಾರತ ದೇಶದ ನಿರ್ದೇಶಕ ಆಗಸ್ಟೆ ತಾನೋ ಕೌಮೆ ಹೇಳಿದರು.

ಮುಖ್ಯವಾಗಿ ಈ ಕಾರ್ಯಕ್ರಮವು ನೀರು ಸರಬರಾಜು ಸೇವೆಗಳನ್ನು ಸಮರ್ಥವಾಗಿ ನಿರ್ವಹಿಸುವ ಗ್ರಾಮೀಣ ಸ್ಥಳೀಯ ಸರ್ಕಾರಗಳ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಶುದ್ಧ ನೀರಿನಂತಹ ಮೂಲಭೂತ ಸೇವೆಗಳ ಪ್ರವೇಶವು ಮಹಿಳೆಯರ ಜೀವನದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ. ಏಕೆಂದರೆ, ಅವರು ನೀರನ್ನು ತರುವ ದೊಡ್ಡ ಹೊರೆಯನ್ನು ಹೊಂದಿರುತ್ತಾರೆ. ಅವರೀಗ ಉತ್ತಮ ಆರೋಗ್ಯವನ್ನು ಹೊಂದಬಹುದು. ಶಿಕ್ಷಣ ಮತ್ತು ಔಪಚಾರಿಕ ಉದ್ಯೋಗಗಳಿಗೆ ಅವಕಾಶಗಳನ್ನು ಮುಂದುವರಿಸಲು ಹೆಚ್ಚಿನ ಸಮಯ ಸಿಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಕಳೆದ ದಶಕಗಳಲ್ಲಿ ಗ್ರಾಮೀಣ ನೀರು ಪೂರೈಕೆಯಲ್ಲಿ ಪ್ರಗತಿ ಸಾಧಿಸಿದ್ದರೂ, ಸ್ಥಳೀಯ ಮತ್ತು ಗ್ರಾಮ ಮಟ್ಟದಲ್ಲಿ ಅಸಮರ್ಪಕ ಸಾಮರ್ಥ್ಯವು ಹಿನ್ನಡೆಗೆ ಕಾರಣವಾಗಿದೆ. ಇದನ್ನು ಪರಿಹರಿಸಲು, ಗ್ರಾಮೀಣ ನೀರು ಸರಬರಾಜು ಸೇವೆಗಳ ವಿತರಣೆಯಲ್ಲಿ ಒಟ್ಟಾರೆ ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್ ರಾಜ್ಯ ಸರ್ಕಾರವನ್ನು ಬೆಂಬಲಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

# ರಾಹುಲ್ ಅನರ್ಹತೆ ವಿರುದ್ಧ ಕಾಂಗ್ರೆಸ್ಸಿಗರ ಬೃಹತ್ ಪ್ರತಿಭಟನೆ



ಹುಬ್ಬಳ್ಳಿ: ಎಐಸಿಸಿ ಮಾಜಿ ಅಧ್ಯಕ್ಷ, ಕಾಂಗ್ರೆಸ್ ರಾಷ್ಟ್ರೀಯ ನಾಯಕಢ ರಾಹುಲ್ ಗಾಂಧಿ ಅವರನ್ನು ಕೇಂದ್ರದ ಆಡಳಿತರೂಢ ಬಿಜೆಪಿ ಸರಕಾರ ಉದ್ದೇಶಪೂರ್ವಕವಾಗಿಯೇ ಸಂಸದ ಸ್ಥಾನದಿಂದ ಅನರ್ಹಗೊಳಿಸಿದೆ ಎಂದು ಖಂಡಿಸಿ ಹುಬ್ಬಳ್ಳಿಯ ಪ್ರಧಾನ ಅಂಚೆ ಕಚೇರಿ ಎದುರಿನ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿ ಆವರಣದಲ್ಲಿಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಮೈನಾರಿಟಿ ಜಿಲ್ಲಾ ಕಾಂಗ್ರೆಸ್ ಘಟಕಗಳ ಅಧ್ಯಕ್ಷರುಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಶಾಸಕ ಪ್ರಸಾದ ಅಬ್ಬಯ್ಯ, ಉಭಯ ಡಿಸಿಸಿ ಅಧ್ಯಕ್ಷರಾದ ಅಲ್ತಾಫ್ ಹಳ್ಳೂರು, ಅನೀಲಕುಮಾರ ಪಾಟೀಲ, ಎಚ್. ಎಫ್.ಜಕ್ಕಪ್ಪನವರ, ವಾಕರಸಾ ಸಂಸ್ಥೆ ಮಾಜಿ ಅಧ್ಯಕ್ಷರಾದ ಸದಾನಂದ ಡಂಗನವರ, ಪಾಲಿಕೆ ವಿರೋಧಪಕ್ಷದ ನಾಯಕ ದೊರಾಜ ಮಣಿಕುಂಟ್ಲ, ಹು–ಧಾ ಮಹಾನಗರ ಜಿಲ್ಲಾ ಒಬಿಸಿ ಘಟಕದ ಅಧ್ಯಕ್ಷ ಪ್ರಕಾಶ ಬುರಬುರೆ, ಎಸ್ಸಿ ಘಟಕದ ಅಧ್ಯಕ್ಷ ಬಸವರಾಜ ಬೆಣಕಲ್, ಎಸ್ಟಿ ಘಟಕದ ಅಧ್ಯಕ್ಷ ಭರಮಪ್ಪ ಬಂಗಾರಿ, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಇನಾಯತಖಾನ್ ಪಠಾಣ, ಮಹಿಳಾ ಘಟಕದ ಅಧ್ಯಕ್ಷೆ ದೀಪಾ ನಾಗರಾಜ ಗೌರಿ, ಶಾರುಖ ಮುಲ್ಲಾ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

# ವಿಕಲಚೇತನ ವಿದ್ಯಾರ್ಥಿಗಳಿಗೆ ಉಪಕರಣ ವಿತರಣೆ




ಬಳ್ಳಾರಿ: ಬಳ್ಳಾರಿ ನಗರದ ಗಾಂಧಿ ನಗರದಲ್ಲಿರುವ "ಸಮರ್ಥನಂ ಅಂಗವಿಕಲರ ಸಂಸ್ಥೆ"ಯವರು ಹಾಗು ಎ.ಬಿ. ಬಿ. ಸಂಸ್ಥೆಯ ಸಹಯೋಗದೊಂದಿಗೆ ವಿಕಲಚೇತನ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿಕಲಚೇತನ ಉಪಕರಣಗಳನ್ನು ವಿತರಿಸಲಾಯಿತು.

ವೀಲ್‌ಚೇರ್‌ಗಳು 18, ವಾಕರ್‌ಗಳು 02, ಕ್ರಚಸ್ಗಳು 08, ಏರ್ ಬೆಡ್ 05, ವಾಟರ್ ಬೆಡ್ 02 ಗಳನ್ನು. ಮತ್ತು ದೃಷ್ಠಿ ವಿಕಲಚೇತನ ವಿದ್ಯಾರ್ಥಿಗಳಿಗೆ ಉಚಿತ ಮೊಬೈಲ್, ಬ್ಲೂಟೂತ್, ಕ್ಯಾಲ್ಕುಲೇಟರ್, ಬ್ಯಾಗ್, ಕೇನ್, ಬ್ರೈಲ್ ವಾಚ್, ಪೆಂಡ್ರೈವ್‌ಗಳನ್ನು ಸಂಸ್ಥೆಯ ಅವರಣದಲ್ಲಿ ವಿತ–ರಿಸಲಾಯಿತು. ಮುಖ್ಯ ಅತಿಥಿ, ಮಾಜಿ ವಿ.ವಿ.ಸಂಘದ ಅಧ್ಯಕ್ಷ ಹಾಗು ವಕೀಲ ಉಡೆದ ಬಸವರಾಜ ಮತ್ತು ಗಣೇಶ್, ಪೋಷಕತ್ವ ಜಿಲ್ಲಾ ಸಂಯೋಜಕರು, ಡಾನ್ ಬಾಸ್ಕೋ ಸಂಸ್ಥೆಯಿಂದ ಆಗಮಿಸಿ, ದೈಹಿಕ ವಿಕಲಚೇತನ ವಿದ್ಯಾರ್ಥಿಗಳಿಗೆ ಉಪಕರಣಗಳನ್ನು ಸಮರ್ಥನಂ ಅಂಗವಿಕಲರ ಸಂಸ್ಥೆಯು ಮುಖ್ಯ ಅಥಿತಿಗಳಿಂದ ವಿತರಿಸಿದರು.

ಉಡೆದ ಬಸವರಾಜ ಮಾತನಾಡಿ, ಹಲವು ವರ್ಷಗಳಿಂದ ಈ ಸಂಸ್ಥೆಯು ವಿಕಲಚೇತರ ಏಳಿಗೆಗಾಗಿ ತುಂಬಾ ಶ್ರಮಿಸುತ್ತಿರುವುದನ್ನು ಕಂಡಿದ್ದೇನೆ. ಹಾಗೆಯೇ ನಾನು ಸಹ ಈ ಸಂಸ್ಥೆಯ ಹಲವಾರು ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನನ್ನ ಬೆಂಬಲವನ್ನು ನೀಡಿದ್ದೇನೆ. ಇದೇರೀತಿಯಾಗಿ ಇನ್ನು ಮುಂದೆಯು ಸಹ ಈ ಸಮರ್ಥನಂ ಅಂಗವಿಕಲರ ಸಂಸ್ಥೆಗೆ ವಿಕಲಚೇತರ ಏಳಿಗೆಗಾಗಿ ನನ್ನ ಬೆಂಬಲವನ್ನು ನೀಡುತ್ತೇನೆಂದು ಹೇಳಿದರು". ಪೋಷಕತ್ವ ಜಿಲ್ಲಾ ಸಂಯೋಜಕ ಗಣೇಶ್ ಮಾತನಾಡಿ, ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದ ನನಗೆ ಸಂತೋಷ ತಂದಿದೆ.

ಇಂತಹ ಸಂಸ್ಥೆಯು ನಮ್ಮ ಬಳ್ಳಾರಿ ನಗರದಲ್ಲಿರುವುದು ನಮ್ಮೆಲ್ಲರ ಅದೃಷ್ಟವಾಗಿದೆ. ಹಾಗು ವಿಕಲಚೇತನ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯಗಳನ್ನು ನೀಡಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ದಾರಿ ದೀಪವಾಗಿದೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.ಈ ಕಾರ್ಯಕ್ರಮದ ಪ್ರಮುಖ ರುವಾ–ರಿಗಳು ಸಂಸ್ಥೆಯ, ಡಿ.ಮೌನೇಶಪ್ಪ( ಶಾಖೆಯ ಮುಖ್ಯಸ್ಥರು),ಪವಿತ್ರ ರಾಜ್(ಮೊಬಿಲೈಝರ್), ಕಿರಣ್ ಕುಮಾರ್(ಪಿ.ಓ), ಕಾಶಯ್ಯ ಹೀರೆಮಠ್ (ಪಿ.ಓ), ಕಾಡ ಸಿದ್ದ (ವಾರ್ಡನ್), ಗೌತಮಿ ಮತ್ತು ಲಕ್ಷ್ಮಿದೇವಿ ಇದ್ದರು.

# ಶಾಸಕ ನಾಗೇಂದ್ರ ನೇತೃತ್ವದಲ್ಲಿ ಉಪ್ಪಾರ ಸಮುದಾಯದವರು ಕಾಂಗ್ರೆಸ್‌ಗೆ ಸೇರ್ಪಡೆ



ಬಳ್ಳಾರಿ: ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳಗಲ್ ಗ್ರಾಮದ ಉಪ್ಪಾರ ಸಮುದಾಯ ದವರು ಶಾಸಕ ನಾಗೇಂದ್ರರವರ ಸಮಕ್ಷಮದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ನಂತರ ಮಾತನಾಡಿದ ಶಾಸಕ ಬಿ.ನಾಗೇಂದ್ರ ಅವರು, ನೂರಾರು ಬಿಜೆಪಿ ಪಕ್ಷದ ಮುಖಂಡರು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಗೊಂಡಿರುವುದು ಕಾಂಗ್ರೆಸ್‌ಗೆ ಚೈತನ್ಯ ನೀಡಿದೆ ಎಂದರು.

ಕೊಳಗಲ್ ಗ್ರಾಮದ ಉಪ್ಪಾರ ಸಮುದಾಯದ ಬಿಜೆಪಿ ಮುಖಂಡರಾದ ಶಿವರಾಮ್, ರಾಮದಾಸ್, ನಾಗರಾಜ್ ವೀರೇಶ್, ದಾಂಡಾಲಿ ರ್ರಿಸ್ವಾಮಿ, ಧನಂಜಯ್, ಹುಚ್ಚಿ ಈರಪ್ಪ ಈಶ್ವರ್, ಅಣ್ಣಾಜಿ ವೀರೇಶ್, ಈಶ್ವರ್, ನಾಗರಾಜ್, ರುದ್ರಪ್ಪ, ಗೊಲ್ಲರು ದೇವೇಂದ್ರಪ್ಪ, ಅಣ್ಣಾಜಿ, ಅಂಜನಿ, ವೀರೇಶ್, ರಕ್ಕ ವೀರೇಶ್, ತಿಮ್ಮಪ್ಪ ರಾಮಪ್ಪನ ಮಗ, ರಾಮಣ್ಣ, ಉಮಣ್ಣ ಚಕ್ರಪಾಣಿ, ಭೀಮರಾಯ ಉಗ್ಗಿ, ಹನುಮೇಶ್ ಉಗ್ಗಿ, ರುದ್ರಪ್ಪ, ಲೈಟ್ ಕಂಬ ರುದ್ರ, ತಿಪ್ಪೇಸ್ವಾಮಿ, ನಾಗಯ್ಯ, ತಿಪ್ಪಣ್ಣ ದೊಡ್ಡ ತಿಪ್ಪಣ್ಣನ ಮಗ ಈರಣ್ಣ, ಗಂಗಾವತಿ ತಿಮ್ಮಣ್ಣ, ಪೋತರಾಜ್ ಬಸಲಿಂಗಪ್ಪ, ಶೇಷಪ್ಪ, ಪೋತರಾಜ್ ವೀರೇಶ್ ಸೇರಿದಂತೆ ಇನ್ನೂ ಅನೇಕ ಕಾರ್ಯಕರ್ತಯಿ–ರಿಗೆ ಬಿ.ನಾಗೇಂದ್ರ ಅವರು ಕಾಂಗ್ರೆಸ್ ಪಕ್ಷದ ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಕೊಳಗಲ್ ಗ್ರಾಮದ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಸ್ತ್ರೀ ಸಂಘಟನಾ ನಡಿಗೆ ಸಂಭ್ರಮದಿಂದ ಯಶಸ್ವಿ



ಬಳ್ಳಾರಿ: ಟಿ.ಹೆಚ್. ದೀಪ ಸುರೇಶ್ ಬಾಬು"ರವರ ಮಹತ್ವಾಕಾಂಕ್ಷೆಯ ಸಂಕಲ್ಪ ಎಲ್ಲೆಡೆಯು ಅರ್ಥ ಪೂರ್ಣವಾದ ಕಾರ್ಯ ಚಟುವಟಿಕೆಗಳ ಮೂಲಕ ಯಶಸ್ವಿಗೊಳುತ್ತಿದ್ದು, "ಅನ್ನಪೂರ್ಣೇಶ್ವರಿ ಕ್ಯಾಂಪ್ ಮತ್ತು ಮದಿರೆ" ಗ್ರಾಮಗಳ ಅನೇಕ ಮಹಿಳೆಯರನ್ನ ದೀಪ ಸುರೇಶ್ ಅವರು ಸಂಪರ್ಕಿಸಿದರು.

ವಿಶೇಷವಾಗಿ ದೈನಂದಿನ, ಕೂಲಿ ಕೆಲಸದಲ್ಲಿ ನಿರತರಾಗಿರುವ ಅನೇಕ ಮಹಿಳೆಯರನ್ನ ಭೇಟಿ ಮಾಡಿ ಅವರ ಸಮಸ್ಯೆಗಳ ಕುರಿತು ಚರ್ಚಿಸಿ, ಅಗತ್ಯ ಪರಿಹಾರೋಪಾಯವನ್ನು ಅವರಿಂದಲೇ ಪಡೆದು ನೆರವಾಗುವ ಆಶ್ವಾಸನೆಯನ್ನು ನೀಡಿದರು.

ಭೇಟಿ ಮಾಡಿದ ಪ್ರತಿ ಹಳ್ಳಿಯಲ್ಲೂ ತೋರುತ್ತಿರುವ ಅಕ್ಕರೆ, ಅಭಿಮಾನ ತುಂಬಿದ ನಿಷ್ಕಲ್ಮಶ ಪ್ರೀತಿಗೆ ನಾವು ಸದಾ ಚಿರಋಣಿ, ಸ್ತ್ರೀ ಸಂಘಟನಾ ನಡಿಗೆಯನ್ನು ಸಂಭ್ರಮದಿಂದ ಯಶಸ್ವಿಗೊಳಿಸಿದ ಅನ್ನಪೂರ್ಣೇಶ್ವರಿ ಕ್ಯಾಂಪ್ ಮತ್ತು ಮದಿರೆ ಗ್ರಾಮದ ಗ್ರಾಮಸ್ಥರು ಶ್ರೀಮತಿ "ಟಿ ಹೆಚ್ ದೀಪ ಸುರೇಶ್ ಬಾಬು" ರವರ ಮಹತ್ವಾಕಾಂಕ್ಷೆಯ ಸಂಕಲ್ಪ ಎಲ್ಲೆಡೆಯು ಅರ್ಥಪೂರ್ಣವಾದ ಕಾರ್ಯ ಚಟುವಟಿಕೆಗಳ ಮೂಲಕ ಯಶಸ್ವಿಗೊಳುತ್ತಿದೆ ಎಂದು ತಿಳಿಸಿದರು.

# ಕೆ.ಎಲ್.ಇ ದಂತ ವಿದ್ಯಾಲಯದಲ್ಲಿ ಕಾನ್ಸ ಅಂಡ್ ಎಂಡೊ ದಿನಾಚರಣೆ



ಬೆಳಗಾವಿ: ದಂತ ರಕ್ಷಣೆಗಾಗಿ ಭಾರತವು ಪ್ರತಿ ವರ್ಷ ಮಾರ್ಚನಲ್ಲಿ ಕಾನ್ಸ ಅಂಡ್ ಎಂಡೊ (ಉಳುಕು ಹಲ್ಲುಗಳ ಮತ್ತು ಚಿಕೀತ್ಸೆ)ವಾರವನ್ನ ಆಚರಿಸುತ್ತಿದೆ. ಇದರ ಅನುಕರಣಿಯವಾಗಿ ಬೆಳಗಾವಿಯ ಕೆ. ಎಲ್.ಇ ದಂತ ಮಹಾವಿದ್ಯಾಲಯವು ಇತ್ತೀಚೆಗೆ ಕಾನ್ಸ ಅಂಡ್ ಎಂಡೊ ದಿನವನ್ನ ಹಮ್ಮಿಕೊಂಡಿತ್ತು. ಹಾಳಾಗಿರುವ ಹಲ್ಲಿಗಳನ್ನ ಚಿಕಿತ್ಸೆ ನೀಡಿ ಉಳಿಸುವುದಕ್ಕಾಗಿ ಹೊಸ ತಂತ್ರಜ್ಞಾನಗಳು ಪ್ರತಿದಿನ ಅವಿಸ್ಕಾರಗೊಳ್ಳುತ್ತಿದ್ದು ಈ ಕುರಿತು ಇವುಗಳನ್ನ ವೈದ್ಯರ ಮುಖಾಂತರ ಹರಡಲು ನೆರವಾಗುವ ನಿಟ್ಟಿನಲ್ಲಿ ಕಾರ್ಯಕ್ರಮ ಪ್ರಯೋಜನವಾಯಿತು. ಸಮಾರಂಭದ ವಿಶೇಷ ಅತಿಥಿಗಳಾಗಿ ಕನ್ಸರ್ವೇಟಿವ್ ಡೆಂಟಿಸ್ತ್ರಿ ವಿಭಾಗದ ಅಧ್ಯಪಕ ಹಾಗೊ ವೃತ್ತಿಪರ ಉತ್ಪನ್ನ ತಜ್ಞ ಡಾ.ಅನಿಕೇತ್ ಚವ್ಹಾಣ್ ಆಗಮಿಸಿ ಲೇಜರ್ ಇನ ಡೆಂಟಿಸ್ತ್ರಿ ವಿಷಯವನ್ನು ಕುರಿತು ಉಪನ್ಯಾಸ ನೀಡುತ್ತ ವಿವಿಧ ಚಿಕಿತ್ಸಾ ಆಯ್ಕೆಗಳನ್ನ ಹೈಲೈಟ್ ಮಾಡಿದರು. ಅವರು ವಿಶೇಷ ಉಪನ್ಯಾಸ ಮತ್ತು ಪ್ರತ್ಯಕ್ಷಿಕತೆಯನ್ನ ವಿವರಣೆಯಲ್ಲಿ ಹಲ್ಲಿನ ಸಮಸ್ಯೆ ಅತ್ಯಂತ ಸಾಮಾನ್ಯ ಆದರೆ ಅದನ್ನ ನಿರ್ಲಕ್ಷಿಸಿದರೆ ದೇಹದ ಆರೋಗ್ಯದ ಮೇಲೆ ವ್ಯತಿರಿಕ್ತ್ಯ ಪರಿಣಾಮಾ ಬೀರುತ್ತದೆ. ಬಾಯಿಯನ್ನ ಸ್ವಚ್ಚವಾಗಿಡದಿದ್ದಲ್ಲಿ ಹಲ್ಲುಗಳು ಹುಳುಕಾಗಿ ಬಾಯಲ್ಲಿ ಬ್ಯಾಕ್ಟೀರಿಯ ಮತ್ತು ಆಮ್ಲ ಉತ್ಪತ್ತಿಯಾಗಿ ಕುಳಿಗಳಾಗಿ ದಂತ ಕವಚವನ್ನ ಹಾನಿಗೊಳಿಸಿ ಪಕ್ಕದ ಹಲ್ಲುಗಳಿಗೊ ಹರಡುತ್ತದೆ, ಸರಿಯಾದ ಹಂತದಲ್ಲಿ ಚಿಕಿತ್ಸೆ ದೊರೆಯದಿದ್ದಲ್ಲಿ ಹಲ್ಲುನೋವಾಗಿ ಬಾವು ಮತ್ತು ಇತರೆ ಸೊಂಕುಗಳಿಗೆ ಕಾರಣವಾಗಿ ಕೊನೆಗೆ ಹಲ್ಲುಗಳು ನಾಶವಾಗುತ್ತದೆ, ಸರಿಯಾದ ಸಮಯದಲ್ಲಿ ಎಂಡೋಡಾಂಟಿಸ್ಟ್ ತಜ್ಞವೈದ್ಯರನ್ನ ಭೇಟಿಯಾದಲ್ಲಿ ಅಧುನಿಕ ತಂತ್ರಜ್ಞಾನದಡಿಯಲ್ಲಿ ನೋವು ರಹಿತವಾಗಿ ಚಿಕಿತ್ಸೆಯನ್ನ ನೀಡಿ ಹಲ್ಲುಗಳನ್ನ ರಕ್ಷಿಸಬಹುದು ಎಂದು ಹೇಳುತ್ತ ನವೀನ ಚಿಕಿತ್ಸೆಯ ಹಲವು ಮೆಟ್ಟಿಲುಗಳನ್ನ, ಹಲ್ಲಿಸೌದರ್ಯದ ಪುರ್ನವಸತಿ ಕಾರ್ಯವಿಧಾನಗಳನ್ನ, ನಗುವನ್ನ ವಿನ್ಯಾಸಗೋಳಿಸುವ ಪರಿಯನ್ನ ಭಾಗವಹಿಸಿದ್ದ ವೈದ್ಯರಿಗೆ ವಿವರಿಸಿ ತಿಳಿಸಿದರು. 97 ವೈದ್ಯರು ಇದರಲ್ಲಿ ಭಾಗವಹಿಸಿದ್ದರು.

# ಕೂಡಲೇ ಫ್ಲೆಕ್ಸ್, ಬ್ಯಾನರ್, ತೆರವು ಮಾಡಲು ಸೂಚನೆ

ಮಂಗಳೂರು: ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದ್ದು ಬೆಳಿಗ್ಗೆಯಿಂದಲೇ ಮಾದರಿ ಸಂಹಿತೆ ಜಾರಿಗೊಂಡ ಕಾರಣ ಸರ್ಕಾರದ ಅನುದಾನವನ್ನು ಬಳಸಿಕೊಂಡು ಹಾಕಿರುವ ಜಾಹೀರಾತು ಫ್ಲೆಕ್ಸ್, ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಜಿಲ್ಲೆಯಾದ್ಯಂತ ಕೂಡಲೇ ತೆರವುಗೊಳಿಸುವಂತೆ ಜಿಲ್ಲೆಯ ಎಲ್ಲಾ ಚುನಾವಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾ–ರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕುಮಾರ್ ಅವರು ನಿರ್ದೇಶನ ನೀಡಿದರು.

ಅವರು ಮಾ.29ರ ಬುಧವಾರ ಈ ಕುರಿತು ಹಮ್ಮಿಕೊಂಡಿದ್ದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಕ್ಷಣದಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೊಂಡಿದೆ, ಕಾರಣ ಅಧಿಕೃತ ಹಾಗೂ ಅನಧಿಕೃತವಾಗಿ ಹಾಕಲಾಗಿರುವ ಎಲ್ಲಾ ರೀತಿಯ ಜಾಹೀರಾತುಗಳನ್ನು ತೆರವುಗೊಳಿಸಬೇಕು.

ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು.

ಯಾವುದೇ ಸರ್ಕಾರಿ ಕಚೇರಿಯಲ್ಲಿ, ಸರ್ಕಾರದ ಅಧಿಕೃತ ವೆಬ್ಸೈಟ್ಗಳಲ್ಲಿ ಹಾಕಲಾಗಿರುವ ರಾಜಕೀಯ ಪಕ್ಷಗಳ ಮುಖಂಡರ ಭಾವಚಿತ್ರಗಳನ್ನು ಈ ಕೂಡಲೇ ತೆರವುಗೊಳಿಸಬೇಕು ಎಂದ ಅವರು, 24, 72 ಗಂಟೆಯೊಳಗೆ ನಿರ್ವಹಿಸಬೇಕಾದ ಕರ್ತವ್ಯಗಳನ್ನು ವಿವ–ರಿಸಿದರು.

ಒಮ್ಮೆ ತೆರವು ಮಾಡಲಾದ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ ಹಾಗೂ ಕಟ್‌ಔಟಗಳನ್ನು ಪುನಃ ಅಳವಡಿಸಿದ್ದಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ ಹಾಗೂ ಕರ್ನಾಟಕ ತೆರೆದ ಸ್ಥಳಗಳ (ವಿರೂಪಗೊಳಿಸುವಿಕೆ ತಡೆಗಟ್ಟುವ) ಕಾಯ್ದೆ–1981ರಂತೆ ಆರು ತಿಂಗಳ ಜೈಲು ಶಿಕ್ಷೆ, ಎರಡು ಸಾವಿರ ರೂ.ಗಳ ದಂಡ ವಿಧಿಸಬಹುದಾಗಿದೆ.

ಅದನ್ನು ಅನುಗಣ್ಣನಗೊಳಿಸುವಂತೆಯೂ ಸಲಹೆ ನೀಡಿದರು.

ಅದೇ ರೀತಿ ಸಂಬಂಧಿಸಿದ ಅಧಿಕಾ–ರಿಗಳು ಕೈಗೊಂಡ ಕ್ರಮಗಳ ಬಗ್ಗೆ ನಿಗದಿತ ಕಾಲಮಿತಿಯಲ್ಲಿ ವರದಿ ನೀಡಬೇಕು, ಅಧಿಕಾರಿಗಳು ಚುನಾವಣಾ ಕರ್ತವ್ಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು, ನಿರ್ಲಕ್ಷ್ಯತನಕ್ಕೆ ಅವಕಾಶವಿಲ್ಲದಂತೆ ಕಾರ್ಯನಿರ್ವಹಿಸುವಂತೆ ಎಚ್ಚರಿಕೆ ನೀಡಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ಮಾತನಾಡಿ, ಚುನಾವಣಾಧಿಕಾ–ರಿಗಳು ಹಾಗೂ ಸಹಾಯಕ ಚುನಾವಣಾ ಅಧಿಕಾರಿಗಳು ಚುನಾವಣಾ ಆಯೋಗಕ್ಕೆ ನೀಡಬೇಕಾದ ವರದಿಗಳನ್ನು ಕೂಡಲೇ ನೀಡುವಂತೆ ತಿಳಿಸಿದರು.

ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾ ಅಧಿಕಾರಿಗಳು, ತಹಶೀಲ್ದಾರರು, ಸಂಬಂಧಪಟ್ಟ ತಾಲೂಕು ಪಂಚಾಯತ್ ಕಾರ್ಯನಿರ್ವಣಾಧಿಕಾ–ರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾ–ರಿಗಳು, ಪುರಸಭೆಗಳ ಮುಖ್ಯಾಧಿಕಾರಿಗಳು ಭಾಗವಹಿಸಿದ್ದರು.

# ಪಾಂಡು ವಿಜಯ ಅರ್ಥಾತ್ ಕೀಚಕನ ವಧೆ ನಾಟಕ



ಬಳ್ಳಾರಿ: ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಸಿರಿಗೇರಿ ಗ್ರಾಮದಲ್ಲಿ ನಾಗನಾಥೇಶ್ವರ ತಾತನವರ ಜಾತ್ರೆಯ ಪ್ರಯುಕ್ತ ಪಾಂಡುವಿಜಯ ಅರ್ಥಾತ್ ಕೀಚಕನ ವಧೆ ಎಂಬ ಬಯಲು ನಾಟಕ ಕಾರ್ಯಕ್ರಮವನ್ನು ಜನಪ್ರಿಯ ನಾಯಕರಾದ ಸಿದ್ದಪ್ಪನ ವರು ಉದ್ಘಾಟನೆ ಮಾಡು ವುದರ ಮುಖಾಂತರ ಕಲಾವಿದರಿಗೆ ಹಾಗೂ ಸಂಗೀತಗಾರರಿಗೆ ಶುಭ ಹಾರೈಸಲಾಯಿತು.

ಈ ಕಾರ್ಯಕ್ರಮ ಅಡಿವಯ್ಯ ಸ್ವಾಮಿ, ಮಲ್ಲನಗೌಡ, ಬಾಕಟಿ–ಈರಯ್ಯ,ಹುಲಗಪ್ಪ, ಸಿದ್ದಯ್ಯ,ಹನುಮಂತ, ಕೋಮಾರಪ್ಪ, ಈರಣ್ಣ, ಮುದುಕಪ್ಪ, ಜಗದೀಶ,ಶೇಕಣ್ಣ ಮುಂತಾದವರು ಕಾರ್ಯಕ್ರಮ ದಲ್ಲಿ ಭಾಗಿಯಾಗಿದ್ದರು.

# ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ



ಬೆಳಗಾವಿ: ಕೆ.ಎಲ್.ಇ ವಿಶ್ವವಿದ್ಯಾಲಯ ಹಾಗೂ ಕೆ.ಎಲ್.ಇ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರವನ್ನು ಬೆಳಗಾವಿ ತಾಲೂಕಿನ ಇಸ್ಲಾಂಪೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸರಕಾರಿ ಪ್ರೌಢ ಶಾಲಾ ಆವರಣದಲ್ಲಿ ಮಾರ್ಚ್ 3 ರಿಂದ 10 ರವರೆಗೆ ಏಳು ದಿನಗಳ ಕಾಲ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಸ್ಲಾಂಪೂರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಡಾ.ರಾಜು ಬೆಡಸೂರ ಅವರು ಸಸಿಗಳಿಗೆ ನೀರೆರೆಯುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರು ಮತ್ತು ಶಿಬಿರಾಧ್ಯಕ್ಷರಾದ ಡಾ. ಸಂಜೀವ ಕುಮಾರ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಕೆ.ಎಲ್.ಇ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಡಾ. ಅಶ್ವಿನಿ ನರಸಣ್ಣವರ ಸೇರಿದಂತೆ ಪಿ.ಎಚ್.ಸಿ ಮೆಡಿಕಲ್ ಆಫೀಸರ್ ಡಾ. ರಾಹುಲ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾಚಾರ್ಯರಾದ ಮಹಾದೇವಿ ಕೂಡವಕ್ಕಲಗಿ, ಮತ್ತು ಇಸ್ಲಾಂಪುರ ಗ್ರಾಮಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಇಸ್ಲಾಂಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾ.3 ರಿಂದ ಪ್ರಾರಂಭವಾದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾರ್ಚ 10ರ ವರೆಗೆ ಪ್ರತಿ ದಿನ ಗ್ರಾಮಸ್ಥರಲ್ಲಿ ಬೀದಿ ನಾಟಕಗಳ ಮೂಲಕ ಆರೋಗ್ಯ, ಸ್ವಚ್ಚತೆ, ಮಧುಮೇಹ ಅರಿವು ಹಾಗೂ ಜಾಗ್ರತಿಯನ್ನು ಮೂಡಿಸುವ ಮೂಲಕ ನುರಿತ ತಜ್ಞ ವೈದ್ಯರಿಂದ ರಿಂದ ಉಚಿತ ಆರೋಗ್ಯ ತಪಾಸಣೆ, ಕಿವಿ ಮೂಗು ಗಂಟಲು ತಪಾಸಣೆ, ಸಂಪನ್ಮೂಲ ವ್ಯಕ್ತಿಗಳಿಂದ ಜನಸಂಖ್ಯಾ ನಿಯಂತ್ರಣ ಮತ್ತು ಕುಟುಂಬ ಯೋಜನೆ ಹಾಗೂ ಕರ್ಕ ರೋಗದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಅದರಂತೆ ಸ್ವಚ್ಛ ಭಾರತ ಅಭಿಯಾನ, ನೀರಿನ ಶುದ್ಧೀಕರಣ ಮತ್ತು ಸಂಗ್ರಹದ ಕುರಿತು ಇಸ್ಲಾಂಪುರ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು. ಆಯುಷ್ಮಾನ್ ಭಾರತ ಕಾರ್ಯಕ್ರಮದಡಿ ಆಯುಷ್ಮಾನ್ ಭಾರತ ಆರೋಗ್ಯ ಕಾರ್ಡಗಾಗಿ ನೋಂದಣಿ ಮಾಡಲಾಯಿತಲ್ಲದೆ ಆಯುಷ್ಮಾನ್ ಭಾರತ ಆರೋಗ್ಯ ಕಾರ್ಡ ವಿತರಣೆ ಮಾಡಲಾಯಿತು.

ಇಲೆಕ್ಟ್ರಾನಿಕ್ ಮತಯಂತ್ರಗಳ ಬಗ್ಗೆ ಜನ ಸಾಮಾನ್ಯರಲ್ಲಿ ಮಾಹಿತಿಯನ್ನು ನೀಡಲಾಯಿತು. ಮುಂದುವರೆದಂತೆ ಗ್ರಾಮದ ಶಾಲಾ ಮಕ್ಕಳಿಗೆ ದೈಹಿಕ ಅರಿವನ್ನು ಮೂಡಿಸುವ ಜೊತೆಗೆ ಓಟ ಸ್ಪರ್ದೆ ಆಯೋಜಿಸಲಾಗಿತ್ತು.

ವಿಶ್ವ ಮಹಿಳಾ ದಿನದ ಅಂಗವಾಗಿ ಗ್ರಾಮದ ಮಹಿಳೆಯರಿಗಾಗಿ ಕ್ರೀಡೆ ಹಮ್ಮಿಕೊಳ್ಳಲಾಗಿ–ತ್ತು. ಪ್ರತಿ ನಿತ್ಯ ಗ್ರಾಮಸ್ಥರಿಗೆ ಉಚಿತ ಭೌತಿಕ ಚಿಕಿತ್ಸೆ ನೀಡಲಾಯಿತು. ಮತ್ತು ಗ್ರಾಮಸ್ಥರಲ್ಲಿ ಕ್ಯಾನ್ಸರ್ ಬಗ್ಗೆ ಅರಿವನ್ನು ಮೂಡಿಸುವ ಜೊತೆಗೆ ಗ್ರಾಮದಲ್ಲಿ ಸರ್ವೆ ನಡೆಸಲಾಯಿತು.

ಪೌಷ್ಟಿಕ ಆಹಾರ ಸೇವನೆ, ಮುಂತಾದ ಆರೋಗ್ಯವಿಷಯಗಳನ್ನುಮನಮುಟ್ಟುವಂತೆ ಇಸ್ಲಾಂಪುರ ಗ್ರಾಮಸ್ಥರಲ್ಲಿ ಅರಿವನ್ನು ಮೂಡಿಸುವುದರೊಂದಿಗೆ 7 ದಿನಗಳ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಂ–ಯೋಜನಾಧಿಕಾರಿಗಳಾದ ಡಾ.ಸಂತೋಷ ಮೆಟಗುಡ್, ಸಹಾಯಕ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಂ–ಯೋಜನಾಧಿಕಾರಿ ಡಾ.ರಾಘವೇಂದ್ರಸಿಂಗ್ ಧಾರವಾಡಕರ ಹಾಗೂ ಶಿಬಿರದ ವಿದ್ಯಾರ್ಥಿ ಪ್ರತಿನಿಧಿಗಳಾದ ಕು.ಅಶ್ವಿನಿ ನಿಪ್ಪಾಣಿ, ಗೌರಿ ಪಾಟೀಲ, ಮನೋಜ ಪಪ್ಪು ಸೇರಿದಂತೆ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯ ವಿಧ್ಯಾರ್ಥಿಗಳು, ವೈದ್ಯರು ಮುಂತಾದವರು ಉಪಸ್ಥಿತರಿದ್ದರು.

# ಬಳ್ಳಾರಿ ಜಿಲ್ಲೆಯ 5 ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧೆ




ಬಳ್ಳಾರಿ: ಬಳ್ಳಾರಿ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಜೆಡಿಎಸ್ ಪಕ್ಷ ಕಣಕ್ಕಿಳಿಸಲಿದೆಂದು ಪಕ್ಷದ ಮುಖಂಡ ಮೀನಳ್ಳಿ ತಾಯಣ್ಣ ತಿಳಿಸಿದರು. ನಗರದ ಜಿಲ್ಲಾ ಜೆಡಿ–ಎಸ್ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಸೋಮಲಿಂಗನಗೌಡ ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿ. ಜೆಡಿಎಸ್ ಪಕ್ಷದಿಂದ ರಾಜ್ಯದಲ್ಲಿ ಈಗಾಗಲೇ 93 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಸಂಡೂರು ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿ ಕುರೆಕುಪ್ಪ ಸೋಮಪ್ಪ ಅವರನ್ನು ಆಯ್ಕೆಮಾಡಿದೆ. ಬಳ್ಳಾರಿ ನಗರದಿಂದ ಮುನ್ನಾಭಾಯ್, ಕಂಪ್ಲಿಯಿಂದ ಕಾಂಗ್ರೆಸ್ ತೊರೆದು ಮಾ.30ರಂದು ಜೆಡಿಎಸ್ ಸೇರಲಿರುವ ಗಂಗಾವತಿ ಮೂಲದ ರಾಜುನಾಯಕ್, ಸಿರುಗುಪ್ಪ ಕ್ಷೇತ್ರದಿಂದ ಪರಮೇಶ್ವರ ನಾಯಕ್ ಅವರು ಸ್ಪರ್ಧಿಸಲಿದ್ದಾರೆ. ಬಳ್ಳಾರಿ ಗ್ರಾಮೀಣ ಕ್ಷೇತ್ರಕ್ಕೆ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ನಡೆದಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷದಿಂದ ಮನೆ ಮನೆಗೆ ಮುನ್ನಬಾಯಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ಹೇಳಿದರು.

ಜೆಡಿಎಸ್ ರಾಜ್ಯದ 123 ಕ್ಷೇತ್ರದಲ್ಲಿ ಗೆಲ್ಲುವ ಗುರಿ ತಲುಪಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಸದ್ಯದಲ್ಲೇ ಪಕ್ಷದ ಮುಖಂಡ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಅಧ್ಯಕ್ಷ ಇಬ್ರಾಹಿಂ ಸಾಬ್ ಅವರ ಕುರುಗೋಡು, ಕಂಪ್ಲಿ, ಬಳ್ಳಾ–ರಿಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಬಹಿರಂಗ ಸಭೆ ನಡೆಸಲಿದ್ದಾರೆಂದರು. ರಾಜ್ಯದಲ್ಲಿ ಈ ವರಗೆ ಮುಸ್ಲಿಂರಿಗೆ ಇದ್ದ ಮೀಸಲಾತಿ ರದ್ದು ಮಾಡಿದ್ದು ಸರಿಯಲ್ಲ. ನಮ್ಮ ಪಕ್ಷ ಅಧಿಕಾರಕ್ಕೆ ಬಂದ್ರೆ ಮೀಸಲಾಸತಿಯನ್ನು ಮತ್ತೆ ತರಲಿದೆಂದರು. ಎಸ್ಟಿಗಳಿಗೆ ಮೀಸಲಾತಿ ಹೆಚ್ಚಳ ಎಂದರು. ಇನ್ನೂ ಅದಕ್ಕೆ ಕೇಂದ್ರದಲ್ಲಿ ಸಮ್ಮತಿ ಆಗಿಲ್ಲ. ಚುನಾವಣಾ ಸಂದರ್ಭದಲ್ಲಿ ಬಿಜೆಪಿಯಿಂದ ತುಟಿಗೆ ತುಪ್ಪ ಸವರುವ ಕೆಲಸ ಆಗಿದೆಂದರು. ಸುದ್ದಿಗೋಷ್ಟಿಯಲ್ಲಿ ಪಕ್ಷದ ಮುಖಂಡರುಗಳಾದ ಮುನ್ನಾಭಾಯ್, ಬಂಡೆಗೌಡ, ಲಕ್ಷ್ಮೀಕಾಂತರೆಡ್ಡಿ, ವಿಜಯ್ ಕುಮಾರ್ ಮೊದಲಾದವರು ಇದ್ದರು.

# ಕಾನೂನು ಉಲ್ಲಂಘನೆಯಾಗದಂತೆ ಕಟ್ಟು ನಿಟ್ಟಿನ ಕ್ರಮಕೈಗೊಳ್ಳಲು ಪೂರ್ವ ಸಿದ್ದತೆ



ಹುಕ್ಕೇರಿ: ಕರ್ನಾಟಕದ ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣಾ ದಿನಾಂಕ ಘೋಷಣೆಯ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಕಾನೂನು ಉಲ್ಲಂಘನೆಯಾಗದಂತೆ ಕಟ್ಟು ನಿಟ್ಟಿನ ಕ್ರಮಕೈಗೊಳ್ಳಲು ಪೂರ್ವ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಹುಕ್ಕೇರಿ ಹಾಗೂ ಯಮಕನಮರಡಿ ವಿಧಾನ ಸಭಾ ಮತ ಕ್ಷೇತ್ರಗಳ ಚುನಾವಣಾ ಅಧಿಕಾ–ರಿಗಳಾದ ಜಿ.ಪಂ ಉಪ ಕಾರ್ಯದರ್ಶಿ ವಿಜಯ ಕುಮಾರ ಅಜೂರೆ.ಮತ್ತು ಉಪವಿಭಾಗಧಿಕಾರಿ ಬಲರಾಮ ಚಹ್ವಾನ ಜಂಟಿಯಾಗಿ ಪತ್ರಿಕಾಗೋಷ್ಟಿಯಲ್ಲಿ ಹೇಳಿದರು.

ವಿಧಾನಸಭಾ ಚುನಾವಣಾ ದಿನಾಂಕ ಪ್ರಕಟಿಸಿರುವ ಹಿನ್ನೆಲೆಯಲ್ಲಿ ತಹಶಿಲ್ದಾರ ಕಚೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ವಿವಿಧ ಪಕ್ಷಗಳ ಮುಖಂಡರ ಮತ್ತು ಪತ್ರಿಕಾಗೋಷ್ಠಿಯಲ್ಲಿ ಸಭೆಯಲ್ಲಿ ಮಾತನಾಡಿ ತಾಲೂಕಿನಲ್ಲಿಯ ಎರಡು ಮತಕ್ಷೇತ್ರಗಳಾದ ಹುಕ್ಕೇರಿ ಮತ್ತು ಯಮಕನಮರಡಿ ವಿಧಾನ ಸಭಾ ಕ್ಷೇತ್ರಗಳಲ್ಲಿ ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಲಾಗಿರುವ ಎಲ್ಲ ತಂಡಗಳು ಕಾರ್ಯನಿರ್ವಹಿಸುತ್ತಿವೆ.

ಹುಕ್ಕೇರಿ ವಿಧಾನ ಮತಕ್ಷೇತ್ರದಲ್ಲಿ 1ಲಕ್ಷ 99ಸಾವಿರ ,99 ಮತದಾರರಿದ್ದು.ಅದರಲ್ಲಿ 99. ಸಾವಿರ 492 ಪುರುಷರು, ಹಾಗೂ 99 ಸಾವಿರ 591 ಜನ ಮಹಿಳಾ ಮತದಾರರು ಮತ್ತು 8 ಜನ ತೃತೀಯ ಲಿಂಗದವರಿದ್ದು. 4718 ಜನ ಯುವ ಮತದಾರು ಇದ್ದಾರೆ. 224 ಮತಗಟ್ಟೆಗಳಿದ್ದು ಅತಿ ಸೂಕ್ಷ 36 ಗುರುತಿಸಲಾಗಿದೆ.

ಗಡಿ ಭಾಗದ ಹಿಟ್ನಿ,ನಾಗನೂರ,ಬುಗಟಿ ಆಲೂರ,ಬೈರಾಪೂರ ನಾಲ್ಕು ಕಡೆ ಚೆಕ್ಕಪೋಷ್ಟ ಕೇಂದ್ರಗಳನ್ನು ತೆರೆಯಲಾಗಿದೆ.

ಹುಕ್ಕೇರಿ ಮತಕ್ಷೇತ್ರದ ಮಾಹಿತಿಗಾಗಿ ತಹಶಿಲ್ದಾರ ಕಚೇರಿಯಲ್ಲಿ ಕೇಂದ್ರ ತೆರೆಯಲಾಗಿದೆ. ಅಲ್ಲಿ ಚುನಾವಣಾಧಿಕಾರಿ ವಿಜಯಕುಮಾರ ಅಜೂರೆ ಹಾಗೂ ಸಹಾಯಕ ಚುನಾವಣಾಧಿಕಾರಿ ತಹಶಿಲ್ದಾರ ಸಂಜಯ ಇಂಗಳೆ ಕಾರ್ಯನಿರ್ವಹಿಸುತ್ತಾರೆ.ಯಮಕನಮರಡಿ ಮೀಸಲು ಮತಕ್ಷೇತ್ರದಲ್ಲಿ 1ಲಕ್ಷ 93 ಸಾವಿರ 871 ಮತದಾರರಿದ್ದು 96 ಸಾವಿರ 749 ಪುರುಷರು, 97ಸಾವಿರ 114 ಮಹಿಳೆ ಮತದಾರರು, 8 ಜನ ತೃತೀಯ ಲಿಂಗಿ ಮತದಾರಿದ್ದು, 5315ಜನ ಯುವ ಮತದಾರರು ಸೇರಿದ್ದಾರೆ.235 ಮತಗಟ್ಟೆಗಳಿವೆ.

ಗಡಿ ಭಾಗದ ಚಿಕ್ಕಾಲಗುಡ್ಡ,ಉ. ಖಾನಾಪೂರ, ದಡ್ಡಿ. ಶೆಟ್ಟಿಹಳ್ಳಿ ಯ ನಾಲ್ಕು ಕಡೆ ತಪಾಸಣೆ ಕೇಂದ್ರಗಳು ತೆರೆಯಲಾಗಿದೆ. ಯಮಕನಮರಡಿ ವಿಧಾನ ಸಭಾ ಮತಕ್ಷೇತ್ರದ ಮಾಹಿತಿಗಾಗಿ ಮಿನಿವಿದಾನ ಸೌದ ಪಕ್ಕದಲ್ಲಿ ಸಮಾಜ ಕಲ್ಯಾಣ ಕಚೇರಿಯಲ್ಲಿ ತೆರೆಯಲಾಗಿದೆ. ಚುನಾವಣಾಧಿಕಾರಿ ಬಲರಾಮ ಚಹ್ವಾನ ಹಾಗೂ ಸಹಾಯಕ ಚುನಾವಣಾಧಿಕಾರಿ ಇಓ ವಿಲಾಸ ರಾಜ ಕಾರ್ಯನಿರ್ವಹಿಸುವರು. ಸಿ.ಪಿ.ಐ ರಮೇಶ ಛಾಯಾಗೋಳ ಮಾತನಾಡಿ ಮಾದರಿ ನೀತಿಸಂಹಿತೆ ಉಲ್ಲಂಘನೆ ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಅಕ್ರಮ ನಗದು, ಮದ್ಯ ಮತ್ತಿತರ ವಸ್ತುಗಳ ಸಾಗಾಣಿಕೆ ಮೇಲೆ ನಿಗಾ ವಹಿಸಲಾಗುವದು. ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಚುಮಾವಣೆಗೆ ಹಾಗೂ ಚುನಾವಣಾ ಪ್ರಚಾರಕ್ಕೆ ಸಂಬಂದಿಸಿದ ಸುಳ್ಳು ಸುದ್ದಿಗಳು ಕಂಡುಬಂದರೆ ಪ್ರಕರಣ ದಾಖಲಿಸಲಾಗುವದು.

ಸಭೆಯಲ್ಲಿ ತಹಶಿಲ್ದಾರ ಸಂಜಯ ಇಂಗಳೆ,ಸಿಪಿಐ ರಫೀಕ ತಹಶಿಲ್ದಾರ, ಪ್ರಲ್ಹಾದ ಚನ್ನಗಿರಿ, ರವಿ ಪಾಟೀಲ, ಇಓ ವಿಲಾಸ ರಾವ್ ರಾಜ ಎಮ್ ಎಸ ಬಾಲ್ದಾರ, ಸಂತೋಷ ನಾಯಿಕ ಅಬಕಾರಿ ನಿರೀಕ್ಷಕರು, ಮತ್ತಿತರರು ಉಪಸ್ಥಿತರಿದ್ದರು.

## ಕಾರ್ಯಾರಂಭಕ್ಕೆ ಸೂಚನೆ

ಮಂಗಳೂರು: ರಾಜ್ಯ ವಿಧಾನಸಭಾ ಚುನಾವಣೆ–2023ಕ್ಕೆ ಸಂಬಂಧಿಸಿದಂತೆ ನೇಮಕವಾಗಿರುವ ಜಿಲ್ಲಾಮಟ್ಟದ ನೋಡಲ್ ಅಧಿಕಾರಿಗಳು ತಕ್ಷಣದಿಂದಲೇ ತಮ್ಮ ಚುನಾವಣೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಜಿಲ್ಲಾ ಚುನಾವಣಾಧಿಕಾರಿ ಕಚೇರಿಯಿಂದಲೇ ನಿರ್ವಹಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಯಿ ಮಗು ಕಾಣೆ

ಮಂಗಳೂರು: ಕಾರ್ನಾಡು ಗ್ರಾಮದ ನಿವಾಸಿ ಉಮಾದೇವಿ (28 ವರ್ಷ) ಹಾಗೂ ವಿದ್ಯಾ (2 ವರ್ಷ) ಮಾರ್ಚ್ 1 ರಿಂದಢ ಕಾಣೆಯಾಗಿದ್ದಾರೆ. ಈ ಬಗ್ಗೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಚಹರೆ:** ಉಮಾದೇವಿ: 5 ಅಡಿ ಎತ್ತರ, ಗೋಧಿ ಮೈ ಬಣ್ಣ, ಸಾಧಾರಣ ಶರೀರ, ಕೆಂಪು ಬಣ್ಣದ ನೈಟಿ ಧರಿಸಿರುತ್ತಾರೆ.

ವಿದ್ಯಾ: 2.5 ಅಡಿ ಎತ್ತರ, ಗೋಧಿ ಮೈ ಬಣ್ಣ, ಕೆಂಪು ಬಣ್ಣದ ಅಂಗಿ ಧರಿಸಿರುತ್ತಾರೆ.

ಇವರು ಪತ್ತೆಯಾದಲ್ಲಿ ಮುಲ್ಕಿ ಪೊಲೀಸ್ ಠಾಣೆ ದೂ.ಸಂಖ್ಯೆ: 0824–2290533, 9480805359, 9480805332 ಮಂಗಳೂರು ನಗರ ಕಂಟ್ರೋಲ್ ರೂಂ 0824–2220800 ಸಂಪರ್ಕಿಸುವಂತೆ ಮುಲ್ಕಿ ಪೊಲೀಸ್ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಹಿತಿಗಾಗಿ ಸಂಪರ್ಕಕ್ಕೆ ಕರೆ

ಮಂಗಳೂರು: ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲೆಗೆ 8 ನೇ ತರಗತಿಗೆ ಪ್ರವೇಶಕ್ಕೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಏ.20ರ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ.

ಆಸಕ್ತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಪರೀಕ್ಷೆಯ ಕುರಿತಾದ ಕೆಲವು ಸೂಚನೆಗಳನ್ನು ಹಾಗೂ ಪಠ್ಯಕ್ರಮದ ಬಗ್ಗೆ ಮಾಹಿತಿಗಾಗಿ ನಗರದ ರಸಿಕ್ ಚೇಂಬರ್ ನ 3ನೇ ಮಹಡಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಲ್ಲಂ ವೀರಭದ್ರಪ್ಪನವರಿಗೆ ಹುಟ್ಟು ಹಬ್ಬದ ಶುಭಾಶಯಕೋರಿದ ನಾರಾ ಭರತ್



ಬಳ್ಳಾರಿ: ವೀರಶೈವ ಸಮಾಜದ ಹಿರಿಯರು ಹಾಗೂ ಮಾಜಿ ಸಚಿವರಾದ ಅಲ್ಲಂ ವೀರಭದ್ರಪ್ಪನವರ 75 ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳನ್ನು ತಿಳಿಸಿ ನಾರಾ ಭರತ್ ರೆಡ್ಡಿಯವರು ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷರಾದ ಚಾನಾಳ್ ಶೇಖರ್, ಅಲ್ಲಂ ಪ್ರಶಾಂತ್, ಮತ್ತು ಗಂಗಾವತಿ ವೀರೇಶ್ , ಹೋನನ್ನ ಗೌಡ , ಅಂಗಡಿ ಶಂಕರ್, ಬಾದನಹಟ್ಟಿ ರಂಗಪ್ಪ, ಕಗ್ಗಲ್ ಮಂಜುನಾಥ್, ಶ್ರೀಧರ್ ಗೌಡ, ಹಾಗೂ ಬೀಸನ ಹಳ್ಳಿ ಮಂಜುನಾಥ್, ರತ್ನಬಾಬು ಮತ್ತಿತರು ಉಪಸ್ಥಿತರಿದ್ದರು.

## ಕಾರು–ಬೈಕ್ ಮಧ್ಯೆ ಭೀಕರ ಅಪಘಾತ ಸವಾರರಿಬ್ಬರ ದುರ್ಮರಣ



ಚಿಕ್ಕಮಗಳೂರು : ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಯುವಕರು ಮೃತಪಟ್ಟಿರುವ ಘಟನೆ ತರೀಕೆರೆ ತಾಲೂಕಿನ ಬೆಟ್ಟದಹಳ್ಳಿ ಗ್ರಾಮದ ಬಳಿ ನಡೆದಿದೆ.

ಡಿಕ್ಕಿಯ ತೀವ್ರತೆಗೆ ಬೈಕ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು ಮೃತರನ್ನು ತರೀಕೆರೆ ಪಟ್ಟಣದ ಬಿಲಾಲ್ ಮತ್ತು ಅಜೀಮ್ ಎಂದು ಗುರುತಿಸಲಾಗಿದೆ.

ಇನ್ನು ಅಪಘಾತದಲ್ಲಿ ಇಬ್ಬರು ತೀವ್ರವಾಗಿ ಗಾಯಗೊಂಡಿದ್ದು ಕೂಡಲೇ ಅವರನ್ನು ಆಸ್ಪತ್ರೆಗೆ ರವಾನಿಸಲಾಯಿತು. ಆದರೆ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಅಪಘಾತದ ಸ್ಥಳಕ್ಕೆ ತರೀಕೆರೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಹಿಂದೂ, ಮುಸ್ಲಿಂ ಸಮನ್ವಯತೆಯ ಸಂಗಮ: ಸಾವಳಗಿಯ ಶಿವಲಿಂಗೇಶ್ವರ ಜಾತ್ರೆ

ಸಾವಳಗಿ: ಹಿಂದೂ, ಮುಸ್ಲಿಂ ಸೇರಿದಂತೆ ಸರ್ವ ಧರ್ಮಗಳ ಭಾವೈಕ್ಯತೆಯನ್ನು ಸಾರುವ ಸಾವಳಗಿಯ ಶಿವಲಿಂಗೇಶ್ವರ ಜಾತ್ರೆಯು ಇದೇ 9/04/2023ರಿಂದ 18/04/2023.ರವರೆಗೆ ಪೀಠಾಧಿಪತಿ ಶಿವಲಿಂಗೇಶ್ವರ ಕುಮಾರೇಂದ್ರ ಸ್ವಾಮೀಜಿ ಸನ್ನಿಧಿಯಲ್ಲಿ ಜರುಗಲಿದೆ.

ಕಾಶಿ ಕಾಬಾ ಒಂದೇ, ಪುರಾಣ ಕುರಾಣ ಒಂದೇ, ಈಶ್ವರ ಅಲ್ಲಾ ಒಬ್ಬನೇ' ಎನ್ನುವ ಹಿಂದೂ ಮುಸ್ಲಿಂ ಸಾಮರಸ್ಯವನ್ನು ಸಾರುವ ಸಂದೇಶವು ಅಕ್ಷರಶ: ಗೋಕಾಕ ತಾಲ್ಲೂಕಿನ ಸಾವಳಗಿಯ ಶಿವಲಿಂಗೇಶ್ವರ ಪೀಠದಲ್ಲಿ ನಿಜವೆನಿಸಿದೆ. ಸಾವಳಗಿಯ ಶಿವಲಿಂಗೇಶ್ವರ ಹಾಗೂ ಕಲಬುರ್ಗಿಯ ಖಾಜಾ ಬಂದೇನವಾಜರ ಸ್ನೇಹದ ಸಂಕೇತವಾಗಿ ಜಾತ್ಯಾತೀತೆಯನ್ನು ಸಾರುವ ಧಾರ್ಮಿಕ ಸ್ಥಳವೆನಿಸಿದೆ. ಪವಾಡ ಪುರುಷ, ಶಿವಯೋಗಿ ಶಿವಲಿಂಗೇಶ್ವರರು ಮತ್ತು ಅವರ ಪರಮ ಭಕ್ತೆ ಶರಣೆ ಮರುಳಮ್ಮನ ಸಮಾಧಿಗಳು ಒಂದೆಡೆ ಇರುವುದರಿಂದ ಸಾವಳಗಿಯು ನಾಡಿನ ಅತ್ಯಂತ ಜಾಗೃತ ಕ್ಷೇತ್ರವೆನಿಸಿದೆ. ಅಸಂಖ್ಯಾತ ಭಕ್ತರ ಶ್ರದ್ಧಾ ತಾಣವಾಗಿದೆ.

ಹಿನ್ನೆಲೆ: ದೈವಾಂಶ ಪುರುಷರು ಆಗಿರುವ ಸಾವಳಗಿಯ ಶಿವಲಿಂಗೇಶ್ವರರು ಕಲಬುರ್ಗಿ ಜಿಲ್ಲೆಯ ಹಿರೇಸಾವಳಗಿ ಬಳಿಯ ಕೊಳ್ಳೂರು ಗ್ರಾಮದಲ್ಲಿ ಜನನವಾಗಿದ್ದರು. ತಮ್ಮ ದೈವತ್ವ ಸಾಕ್ಷತ್ಕಾರದ ಮೂಲಕ ಲೋಕ ಕಲ್ಯಾಣ



ಮಾಡುತ್ತಾ ಸಾವಳಗಿಯಲ್ಲಿ ನೆಲೆಸಿದರು. ಇವರ ತಪಸ್ಸಿನ ಪ್ರಭಾವವು ಕಲಬುರ್ಗಿಯ ಬಾದಷಾಹ ಸುಲ್ತಾನ್ ರೋಜ್ ಬಹದ್ದೂರರ ಗುರು ಬಂದೇನವಾಜ್ ವಲಿಯವರ ಮೇಲೆ ಬೀರಿತ್ತು. ಮುಸಲ್ಮಾನ್ ಗುರು ಖಾಜಾ ಬಂದೇ ನವಾಜ್ರು ವೀರಶೈವ ಗುರು ಶಿವಲಿಂಗೇಶ್ವರರ ಸಖ್ಯವನ್ನು ಬೆಳೆಸಿರುವ ಪ್ರತೀಕವಾಗಿ ಸಾವಳಗಿಯ ಶ್ರೀಮಠವು ಇಂದಿಗೂ ಭಾವೈಕ್ಯತೆಯನ್ನು ಬಿಂಬಿಸುವ ಜಾಗೃತ ಸ್ಥಳವಾಗಿದೆ. ಮುಸ್ಲಿಂ ಗುರುಗಳು ನೀಡಿದ ಕಾಣಿಕೆ, ಬಟ್ಟೆ ಬರೆಗಳು ಅವರ ಹೆಸರಿನಲ್ಲಿ ಪೀಠದಲ್ಲಿವೆ.

**ಮಠ, ಮಸೀದಿ ವಾಸ್ತುಶಿಲ್ಪ**

ಸಾವಳಗಿ ಪೀಠವು ಮೊದಲ ನೋಟದಲ್ಲಿ ಇದು ಮಠವೋ, ಮಸೀದಿಯೋ ಎನ್ನುವ ಸಂದೇಹ ಬರುವುದು ಸಹಜ. ಮಠದಲ್ಲಿ ಕಮಾನುಗಳು, ಗುಮ್ಮಟ, ಮಿನಾರುಗಳು ಮುಸ್ಲಿಂ ಸಂಸ್ಕೃತಿಯನ್ನು ಬಿಂಬಿಸುತ್ತಿದ್ದು, ಇಲ್ಲಿ ಬರುವ ಭಕ್ತರಿಗೆ ಮಠ ಮತ್ತು ಮಸೀದಿಯ ಎರಡೂ ಒಂದೆಡೆ ಕಾಣುವಂತಾಗುತ್ತದೆ. ಮಸಜಿದ ಮಂದಿರ ಏಕ ಹೈ; ಈಶ್ವರ ಅಲ್ಲಾ ಏಕ ಹೈ' ಎನ್ನುವ ಸದ್ಭಾವನೆ ಇಲ್ಲಿ ಮೂಡುತ್ತದೆ. ಜಾತ್ರೆ, ದಸರಾ ಉತ್ಸವಗಳಲ್ಲಿ ಸನ್ನಿಧಿಯವರು ಈಗಲೂ ಮುಸ್ಲಿಂ ಪದ್ಧತಿಯ ಹಸಿರು ಬಣ್ಣದ ಪೇಟಾ, ಶೈಲಿ, ಶಮನ ಮುಂತಾದ ರಾಜ ಪೋಷಾಕುಗಳನ್ನು ಧರಿಸುತ್ತಾರೆ. ಭಕ್ತರು 'ಧೀನ್ ಹರ ಹರ' ಎಂಬ ಧರ್ಮ ಸಮನ್ವಯವನ್ನು ಸಾರುವ ಉದ್ಘೋಷ ಮಾಡುತ್ತಾರೆ. ಹಿಂದೂ ಮತ್ತು ಮುಸ್ಲಿಂ ಮನೆತನಗಳು ಮಠದ ಸೇವೆಯನ್ನು ಭಕ್ತಿಯಿಂದ ಸಲ್ಲಿಸುತ್ತಾ ಬಂದಿವೆ.

## ಹಂಚಲು ತಂದಿಟ್ಟಿದ್ದ ಕುಕ್ಕರ್ ಹೊಲಿಗೆ ಯಂತ್ರ ವಶ



ಯರಗಟ್ಟಿ : ಮತದಾರರಿಗೆ ಹಂಚಲು ತಂದಿದ್ದ ಕುಕ್ಕರ್ ಹಾಗೂ ಹೊಲಿಗೆ ಯಂತ್ರ ತರಲಾಗಿದೆ ಎಂಬ ಮಾಹಿತಿ ಮೇರೆಗೆ ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ತಂಡವು ಕಾರ್ಯಾಚರಣೆ ನಡೆಸಿ ಯರಗಟ್ಟಿ ಗೋದಾಮಿಫನಲ್ಲಿ ದಾಸ್ತಾನು ಮಾಡಲಾಗಿದ್ದ ಕುಕ್ಕರ್ ಹಾಗೂ ಹೊಲಿಗೆ ಯಂತ್ರಗಳನ್ನು ವಶಪಡಿಸಿಕೊಂಡಿದೆ.

'ಫ್ಯಾಕ್ಟರಿಯವರು ವಿಳಾಸದಲ್ಲಿ ನಮೋದಿಸದೆ. ಪಟ್ಟಣಶೆಟ್ಟಿ ಎಂದು ಹೆಸರು ನಮೂದಿಸಿದ್ದಾರೆ. ಈ ಎಲ್ಲಾ ಸಾಮಗ್ರಿಗಳು ಬಸವರಾಜ ಪಟ್ಟಶೆಟ್ಟಿಯವರಿಗೆ ಸೇರಿದ್ದು ಎನ್ನಲಾಗಿದೆ. ಇವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಸಂಪರ್ಕಕ್ಕೆ ಲಭ್ಯವಾಗದ ಕಾರಣ ಕುಕ್ಕರ್ ಹಾಗೂ ಹೊಲಿಗೆ ಯಂತ್ರಗಳನ್ನು ವಶಕ್ಕೆ ಪಡೆದು, ಮುರಗೋಡ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದೇವೆ' ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ತಂಡವು ಅಧಿಕಾರಿ ಎಸ್. ಎ. ಪಾಟೀಲ ತಿಳಿಸಿದರು.

ಈ ಸಂದರ್ಭದಲ್ಲಿ ಯರಗಟ್ಟಿ ತಹಶೀಲ್ದಾರ ತಹಶೀಲ್ದಾರ ಚಂದ್ರಶೇಖರ ನಾಯ್ಕ ಮುರಗೋಡ ಸಿಪಿಐ ಮೌನೇಶ್ವರ ಮಾಲಿಪಾಟೀಲ, ಯರಗಟ್ಟಿ ಪಿಎಸ್ಐ ಆಯ್. ಎಮ್. ಹಿರೇಗೌಡರ, ಮುರಗೋಡ ಪಿಎಸ್ಐ ಚೆನ್ನಯ್ಯ ದೇವೂರ, ಪ. ಪಂ. ಮುಖ್ಯಾಧಿಕಾರಿ ಕೆ. ಬಿ. ಬೆಣ್ಣಿ ಇದ್ದರು.

## ಬಳ್ಳಾರಿಗೆ 23 ವರ್ಷದ ತ್ರಿವೇಣಿ ನೂತನ ಮೇಯರ್ ರಾಜ್ಯದ ಅತಿ ಕಿರಿಯ ಮೇಯರ್ ಎಂಬ ಹೆಗ್ಗಳಿಕೆ



ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಕಾಂಗ್ರೆಸ್ ಪಕ್ಷದ ಡಿ.ತ್ರಿವೇಣಿ ಆಯ್ಕೆಯಾಗಿದ್ದು ಉಪ ಮೇಯರ್ ಆಗಿ ಬಿ.ಜಾನಕಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇನ್ನು ತ್ರಿವೇಣಿ ರಾಜ್ಯದ ಅತಿ ಕಿರಿಯ ಮೇಯರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬಳ್ಳಾರಿ ಮಹಾನಗರ ಪಾಲಿಕೆಗೆ ಇಂದು ಚುನಾವಣೆ ನಡೆಯಿತು. ಮೇಯರ್ ಸ್ಥಾನ ಪರಿಶಿಷ್ಟ ಜಾತಿಗೆ, ಉಪ ಮೇಯರ್ ಸ್ಥಾನ ಎಸ್ಟಿ ಮಹಿಳೆಗೆ ಮೀಸಲಿತ್ತು.

ಇನ್ನು ಪಾಲಿಕೆಯಲ್ಲಿ 39 ಸದಸ್ಯರಿದ್ದು, ಸಂಸದರು, ಶಾಸಕರ ಮತಗಳಿಂದ ಬಿಜೆಪಿ 16 ಮತಗಳನ್ನು ಹೊಂದಿದ್ದರೆ ಕಾಂಗ್ರೆಸ್ 28 ಮತಗಳನ್ನು ಹೊಂದಿತ್ತು.

ಮೇಯರ್ ಸ್ಥಾನಕ್ಕೆ ಕಾಂಗ್ರೆದ್ ನಿಂದ 35ನೇ ವಾರ್ಡಿನ ಸದಸ್ಯ ವಿ.ಕುಬೇರ, 7ನೇ ವಾರ್ಡಿನ ಉಮದೇವಿ ಶಿವರಾಜ್ ಮತ್ತು ಡಿ.ತ್ರಿವೇಣಿ ಅವರು, ಬಿಜೆಪಿಯಿಂದ 16ನೇ ವಾರ್ಡಿನ ನಾಗರತ್ನ ಅವರು ನಾಮಪತ್ರ ಸಲ್ಲಿಸಿದ್ದರು. ಈ ಮಧ್ಯೆ ಕಾಂಗ್ರೆಸ್ ಪಕ್ಷದ ಕುಬೇರ ಮತ್ತು ಉಮಾದೇವಿ ನಾಮ ಪತ್ರ ಪಡೆದಿದ್ದು ಡಿ.ತ್ರಿವೇಣಿ ಮತ್ತು ನಾಗರತ್ನ ಅವರ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಹಾಜರಿದ್ದ 44 ಸದಸ್ಯರ ಪೈಕಿ ತ್ರಿವೇಣಿ 28 ಮತಗಳನ್ನು ಪಡೆದರೆ ನಾಗರತ್ನ ಅವರು 16 ಮತಗಳನ್ನು ಪಡೆದಿದ್ದರು.

ಮೇಯರ್ ಆಗಿ ತ್ರಿವೇಣಿ ಆಯ್ಕೆಯನ್ನು ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ಘೋಷಣೆ ಮಾಡಿದರು. ಪಾಲಿಕೆ ಆಯುಕ್ತ ರುದ್ರೇಶ್, ಎಡಿಸಿ ಉಪಸ್ಥಿತರಿದ್ದರು.

## ವೈದ್ಯನ ಯಡವಟ್ಟಿಗೆ ಯುವಕ ಸಾವು ಸುದ್ದಿ ಮಾಡಿದ್ದಕ್ಕೆ ಪತ್ರಕರ್ತರ ಮೇಲೆ ಹಲ್ಲೆಗೆ ಯತ್ನ

**ವರದಿ: ಬ್ರಹ್ಮಾನಂದ ಪತ್ತಾರ**



ಅಂಕಲಗುಡಕೇತ್ರ: ವೈದ್ಯ ಮಾಡಿದ ಯಡವಟ್ಟಿನ ಸುದ್ದಿ ಮಾಡಿದ್ದಕ್ಕೆ.ಕರೆ ಮಾಡಿ ಬೆದರಿಕೆ ಹಾಕಿ ಅವಾಚ್ಯವಾಗಿ ಬೈದು ನಿಂದಿಸಿದ ವೈದ್ಯನ ಬೆಂಬಲಿಗರು ಹೌದು ಕಳೆದ ದಿನಗಳ ಹಿಂದಷ್ಟೆ ವೈದ್ಯನೊರ್ವ ಹೈಡೊಜ ಇಂಜೆಕ್ಷನ್ ಗೆ ಯುವಕ ಬಲಿಯಾಗಿದ್ದ ಎಂದು ಸಾವನ್ನಪ್ಪಿದ ಮನೆಯವರು ಕರೆ ಮಾಡಿ ಸುದ್ದಿ ಮಾಡಲು ಹೇಳಿದ್ದರು ಇದನ್ನ ಆದರಿಸಿ ಸುದ್ದಿ ಬಿತ್ತರಿಸಿದ್ದೆವು ಆದರೆ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವದನ್ನ ಗಮನಿಸಿದ ವೈದ್ಯ ಸಾವನ್ನಪ್ಪಿದ ಮನೆಗೆ ಹೋಗಿ 5 ಲಕ್ಷ ರೂಪಾಯಿ ಹಣ ಕೊಟ್ಟು ಬಚಾವ್ ಆಗಿದ್ದ.ಆದರೆ ಆಗಲಿ ಈ ನಕಲಿ ವೈದ್ಯನ ಮೇಲೆ ಕ್ರಮ ಕೈಗೊಳ್ಳದ ಆರೊಗ್ಯ ಇಲಾಖೆ ಹಿಂದೆಟು ಹಾಕುತ್ತಿದೆ.ಪೊನ ಕಾಲ್ ನಲ್ಲಿ ಬೆದ–ರಿಕೆ ಹಾಕಿ ಅವಾಚ್ಯವಾಗಿ ಬೈದು ತಾಕತ್ತಿದ್ದರೆ ನಮ್ಮ ಗ್ರಾಮಕ್ಕೆ ಬಾ ಎಂದು ಕರೆಯುತ್ತಾರೆ. ಆಗ ಈ ವಿಷಯವನ್ನೆಲ್ಲ ನಮ್ಮ ಪತ್ರಿಕಾ ಬಳಗದವ–ರಿಗೆ ಹೇಳಲು ನಿನೊಬ್ಬ ಸಿನಿಯರ್ ಪತ್ರಕರ್ತರ ದಿಟ್ಟತನದಿಂದ ಅಪಾರ ಪ್ರಮಾಣದ ಸುದ್ದಿಯನ್ನು ಮಾಡಿ ಸಮಾಜದಲ್ಲಿ ಬದಲಾವಣೆ ತಂದಿದ್ದಿಯಾ.ನಿನಗೆ ಆದರೂ ಒಂದೆ ನಮಗೆಲ್ಲರಿಗೂ ಬೈದ. ಹಾಗೇ ಎಂದು ವೈದ್ಯನ ಮನೆಗೆ ಕೆಳಲು ಹೊದಾಗ ಪತ್ರಕರ್ತರ ಮೇಲೆ ಹಲ್ಲೆಗೆ ಯತ್ನಿಸಿ ಬೈಕ್ ಗಳನ್ನ ಕಸಿದುಕೊಂಡು ಗೂಂಡಾಗಿರಿ ಮಾಡಿದ್ದಾರೆ ನಂತರ ಪೊಲಿಸರ ಸಹಾಯದಿಂದ ಈ ಗಲಾಟೆ ಶಾಂತಿ ಸ್ವರೂಪ ಪಡೆಯಿತು ಆದರೆ ಈ ನಕಲಿ ವೈದ್ಯನ ಮೇಲೆ ಜಿಲ್ಲಾಡಳಿತ ನಿರ್ದ್ಯಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕೆಂದು ಪತ್ರಕರ್ತರ ಬಳಗದವರು ತೀವ್ರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

## ಮತದಾನ ಜಾಗೃತಿಗಾಗಿ ಬೈಕ್ ರ್‍ಯಾಲಿ



ಹುಕ್ಕೇರಿ : ತಾಲ್ಲೂಕಿನ ಹುಕ್ಕೇರಿ ಮತ್ತು ಯಮನಮರಡಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮತದಾನ ಜಾಗೃತಿಗಾಗಿ ಬೈಕ್ ರ್‍ಯಾಲಿಗೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ವಿಲಾಸರಾಜ್ ಚಾಲನೆ ನೀಡಿಮಾತನಾಡಿದ ಅವರು ಎರಡು ಕ್ಷೇತ್ರಗಳಲ್ಲಿ ಮತದಾರರಿಗೆ ಹೆಚ್ಚಿನ ಜಾಗೃತಿ ಮೂಡಿಸಲು ಕ್ರಮಕೈಕೊಳ್ಳಲಾಗಿದೆ. ಮತದಾನ ಮಾಡುವುದು ನಮ್ಮೆಲ್ಲರ ಕರ್ತವ್ಯ ಮತ್ತು ಹಕ್ಕು ಇರುತ್ತದೆ.

ಯಾವುದೇ ಆಮಿಷಗಳಿಗೆ ಒಳಗಾಗದೇ ಮತದಾನ ಮಾಡಿ ಕಾರಣ 100% ಪ್ರತಿಶತ ಮತದಾನವಾಗಬೇಕು ಎಂದರು

ರ್‍ಯಾಲಿಯು ಹುಕ್ಕೇರಿ ಪಟ್ಟಣ, ಬಸ್ತವಾಡ, ಗೌಡವಾಡ, ಬಡಕುಂದ್ರಿ ಮತ್ತು ಯಮಕನಮರಡಿ ಗ್ರಾಮಗಳಲ್ಲಿ ಸಂಚಾರ ಮಾಡಿ ಮತದಾನ ಜಾಗೃತಿ ಮಾಡಲಾಯಿತು. ಮತದಾನ ಜಾಗೃತಿಗಾಗಿ ಜಿಂಗಲ್ಸ್ ಮತ್ತು ಸ್ಲೋಗನಗಳ ಮೂಲಕ ಪ್ರಚಾರ ಕೈಗೊಳ್ಳಲಾಯಿತು.

# ರಂಗಕಲೆಗಿದೆ ಮನಸನ್ನು ಪರಿವರ್ತಿಸು ಶಕ್ತಿ: ಸಿದ್ದಲಿಂಗ ಶ್ರೀ



ಗದಗ: ಗ್ರಾಮಿಣ ಭಾಗದಲ್ಲಿ ರಂಗಭೂಮಿ ಕಲೆಯನ್ನು ಜೀವಂತವಾಗಿ ಉಳಿಸಿ ಬೆಳೆಸಿ ಪೋಷಿಸುವ ಹೋಣಿಗಾ–ರಿಕೆ ಸಾಮಾಜಿದ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಇದೆ ಎಂದು ಲಕ್ಕುಂಡಿಯ ಅಲ್ಲಮ ಪ್ರಭು ದೇವರು ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು.

ಗದಗ ತಾಲ್ಲೂಕಿನ ತಿಮ್ಮಾಪೂರ ಗ್ರಾಮದ ಶ್ರೀ ಮಾರುತೇಶ್ವರ ಜಾತ್ರೆ ಮಹೋತ್ಸವದ ಅಂಗವಾಗಿ ಶ್ರೀ ಬೀರಲಿಂಗೇಶ್ವರ ತರುಣ ನಾಟ್ಯ ಸಂಘದಿಂದ ಆಯೋಜಿಸಿದ್ದ ಧರ್ಮದ ದೋರೆಗೆ ಕರ್ಮದ ಮಗ ಎಂಬ ಸುಂದರ ಸಾಮಾಜಿಕ ನಾಟಕವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ರಂಗಕಲೆ ಪ್ರತಿಯೊಬ್ಬರ ಮನಸನ್ನು ಪರಿವರ್ತಿಸು ಕಲೆಯಾಗಿದೆ ಎಂದು ಹೇಳಿದರು.

ಅವರು ಇಂದಿನ ಟಿವಿ ಧಾರಾವಾಹಿ ಹಾಗೂ ಮೊಬೈಲ್ ಯುಗದಲ್ಲಿ ನಾಟಕಗಳು ಕಣ್ಮರೆಯಾಗುತ್ತಿದ್ದು ಕೇವಲ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅಲ್ಲಲ್ಲಿ ನಾಟಕಗಳು ಕಾಣಿಸುತ್ತವೆ ನಾಟಕದಲ್ಲಿ ಬರುವಂಥ ಒಳ್ಳೆಯ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ನಾಟಕದಲ್ಲಿ ಬರುವ ಸನ್ನಿವೇಶಗಳು ನಮ್ಮ ನಿಜ ಜೀವನದಲ್ಲಿ ನಡೆಯುವಂಥ ಘಟನೆಗಳನ್ನು ಆಧರಿಸಿರುತ್ತವೆ ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾಟಕದ ಮಾಲಿಕರಾದ ಯಮನೂರಪ್ಪ ಗದಗ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಗದಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಹಾಗೂ ಅಂದಪ್ಪ ಕೋಳುರು ಅತಿಥಿಸ್ಥನವನ್ನು ವಹಿಸಿದ್ದರು.

ಹಾಗೂ ನಾಟಕ ಸಂಘದ ಹಿತೈಷಿ ಮತ್ತು ಮಾಲೀಕರುಗಳಾದ ಯಲ್ಲಪ್ಪ ಡಂಬಳ, ಕರಿಯಪ್ಪ ಬಾಬರಿ, ರಾಮಪ್ಪ ಡಂಬಳ, ಈರಪ್ಪ ಕೂಪ್ಪದ, ಮಾರುತಿ ಇದ್ಲಿ , ಬೀರಪ್ಪ ಬನ್ನಾಪೂರ, ಶಿವಪುತ್ರಪ್ಪ ದೇವರವರ,ರವಿ ಗಂಗರಾತ್ರಿ, ಶ್ರೀಕಾಂತ ಸೋರಿ, ನಾಗಪ್ಪ ಆಲೂರ, ಯಲ್ಲಪ್ಪ ಹಾಗಲದ,ಪರಸುರಾಮಪ್ಪ ಹಳ್ಳಿಕೇರಿ, ರಾಮಣ್ಣ ಕಂಕರಿ,ಹನುಮಪ್ಪ ಜೋಗಿನ ಶರಣಪ್ಪ ಜೋಗಿನ, ಹುಚ್ಚೀರಪ್ಪ ಜೋಗಿನ ,ಗೂಳಪ್ಪ ಹಚ್ಚಪ್ಪನವರ , ಮಾರುತಿ ಕಟಗಿ, ಮಲ್ಲಪ್ಪ ಮಡಿವಾಳರ ಬಸವರಾಜ ದೇವರವರ,ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಮೀಸಲಾತಿ ಯಥಾಸ್ಥಿತಿ ಮುಂದುರೆಸಲು ಒತ್ತಾಯ



ನಾಲತವಾಡ: ಅಲ್ಪಸಂಖ್ಯಾತರ 2ಬಿ ಶೇ.4 ರಷ್ಟು ಮೀಸಲಾತಿಯನ್ನು ಉದ್ದೇಶಪೂರ್ವಕವಾಗಿ ಸಿಎಂ ಬೊಮ್ಮಾಯಿಯವರು ರದ್ದುಗೊಳಿಸುವ ಮೂಲಕ ಬಡ ಅಲ್ಪಸಂಖ್ಯಾತರ ಜನರ ಶಾಪಕ್ಕೆ ಗುರಿಯಾಗಿದ್ದಾರೆ.

ಈ ನಿರ್ಧಾರವನ್ನು ಕೈಬಿಡಬೇಕು ಒಂದು ವೇಳೆ ತಮ್ಮದೇ ಮುಂದುವರೆಸಿದ್ದಲ್ಲಿ ಪ್ರತಿ ಗ್ರಾಮ ಮಟ್ಟದಲ್ಲೂ ಕೋಮು ದಳ್ಳುರಿಗೆ ಆರಂಭಗೊಳ್ಳುತ್ತವೆ.

ಈ ಕುರಿತು ಘಟನಾವಳಿಗಳಿಗೆ ಬೊಮ್ಮಾಯಿ ಯವರೇ ಹೊಣೆಯಾಗುತ್ತಾರೆ ಎಂದು ಸ್ಥಳಿಯ ಅಂಜುಮನ್ ಸಮೀತಿಯ ಅಧ್ಯಕ್ಷರಾದ ಎಲ್.ಎಚ್.ಅವಟಿ ಹೇಳಿದರು.

ಪಟ್ಟಣದ ಅಂಜುಮನ್ ಇಸ್ಲಾಂ ಕಮೀಟಿಯ ಸಭಾ ಭವನದ ಸಭೆಯಲ್ಲಿ ಅವರು ಮಾತನಾಡಿ ನಂತರ ಮೀಸಲಾತಿಯನ್ನು ಯಥ–ಾಸ್ಥಿತಿ ಮುಂದುವರೆಸುವ ಕುರಿತು ಉಪ ತಹಶೀಲ್ದಾರ ಮೂಲಕ ರಾಜ್ಯಪಾಲರ ಮೂಲಕ ಮನವಿ ಸಲ್ಲಿಸಿ ಮಾತನಾಡಿದ ಅವರು ಬಿಜೆಪಿ ಪಕ್ಷದ ತಮ್ಮ ರಾಜ–ಕಾರಣ ಪ್ರತೀಷ್ಟಿತ ಅಲ್ಪಸಂಖ್ಯಾತರ ವಿರುದ್ದ ಇರಬಹುದು ಆದರೆ ಬಡವರ ಜೊತೆ ಚೆಲ್ಲಾಟ ಏಕೆ? ಸಂವಿಧಾನದ ಅಡಿಯಲ್ಲಿ ದೊರಕಿಸಿಕೊಂಡ ಐತಿಹಾಸಿಕ ಮೀಸಲಾತಿಗಳನ್ನು ತಾವು ಏಕಾಏಕಿ ಮುಸ್ಲಿಂರನ್ನು ಗುರಿ ಇಟ್ಟುಕೊಂಡು ರದ್ದು ಗೊಳಿಸಿದ್ದೀರಿ ತಾವು ಸಿಎಂ ಆಗುವ ಮೊದಲ ಏನೆಂದು ಪ್ರಮಾಣ ಮಾಡಿ ಅಧಿಕಾರ ಪಡೆದುಕೊಂಡಿದ್ದೀರಿ ಎಂದು ಪ್ರಶ್ನಿಸಿದರು.

ಬೇರೆಯವರಿಗೆ ಮೀಸಲಾತಿ ಒದಗಿಸಿ ನಮಗೆ ಯಾವದೇ ತಂಟೆ ತಕಾರಾರು ಇಲ್ಲ, ಮತ್ತೊಬ್ಬರ ಮೀಸಲಾತಿ ಕಸಿದುಕೊಳ್ಳುವ ನೀವು ಸಂವಿಧಾನ ನಿಮ್ಮ ಮನೆಯಲ್ಲಿ ರಚಿಸಲಾಯಿತೆ ಎಂದರು. ಮೀಸಲಾತಿಯ ವರ್ಗಗಳ ಸೌಲಭ್ಯಗಳನ್ನು ಮನ ಬಂದಂತೆ ವಿಸ್ತರಿಸುತ್ತೀರುವ ನಿಮಗೆ ಯಾವ ಹಕ್ಕು ಇದೆ ಎಂದರು. ಕೀಳು ಮಟ್ಟದ ರಾಜಕೀಯ ನಿಮ್ಮ ತಂದೆ ಎಸ್.ಆರ್.ಬೊಮ್ಮಾಯಿಯವರಿಗೆ ಗೊತ್ತೇ ಇರಲಿಲ್ಲ, ಕನೀಷ್ಟ ಪಕ್ಷ ತಂದೆಯ ಹಾದಿಯಾದರೂ ಹಿಡಿದು ರಾಜಕೀಯ ಮಾಡಬೇಕು, ಯಾವೋ ಹಲವು ಕುತಂತ್ರಿ ಜಾತಿ ರಾಜಕಾರಣ ಮಾಡುವ ಶಾಸಕರ ಮಾತಿಗೆ ಮಣೆದು ಬಡ ಅಲ್ಪಸಂಖ್ಯಾರ ಮೀಸಲಾತಿ ಕಸಿದುಕೊಳ್ಳುತ್ತೀರಲ್ಲ ಇದು ನಾಚಿಕೆಯ ನಿರ್ಧಾರ ಎಂದರು.

ಮನವಿ ಸಲ್ಲಿಕೆ: ಮುಸ್ಲಿಂ ಸಮುದಾಯದ ಮೇಲೆ ಗುರಿ ಇಟ್ಟುಕೊಂಡ ಬಿಜೆಪಿ ಬಿಜೆಪಿ ಸರಕಾರ ಅಲ್ಪಸಂಖ್ಯಾತರ 2ಬಿ ಶೆ.4 ಮೀಸಲಾತಿ ರದ್ದುಗೊಳಿಸಿದ್ದನ್ನು ಖಂಡಿಸಿ ಉಪ ತಹಶೀಲ್ದಾರರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಗನಿಸಾಬ್ ಖಾಜಿ, ಮೌಲಾಸಾಹೇಬ ರಕ್ಕಸಗಿ, ರಜಾಕಸಾಹೇಬ ನಾಯ್ಕೋಡಿ ಮಾತನಾಡಿದರು.

ಸಭೆಯಲ್ಲಿ ಉಮರಫಾರೂಕ ಮೂಲಿಮನಿ, ದಸ್ತಗೀರಸಾಬ ಆರೇಶಂಕರ, ಅಲ್ಲಾಬಕ್ಷ ಕುಳಗೇರಿ, ಇಬ್ರಾಯಿಂ ಮುಲ್ಲಾ, ಹುಸೇನಸಾಬ ಮೂಲಿಮನಿ, ಕಾಶಿಮಸಾಬ ಎತ್ತಿನಮನಿ, ದಾದಾ ಎತ್ತಿನಮನಿ, ಹಸನಸಾಬ ಕುಳಗೇರಿ, ನಬಿರಸೂಲ ಕಂಚಗಾರ,ಪೀರಸಾಬ ಅವಟಿ, ಖುದಾನಸಾಬ ಕಸ್ಸಾಬ, ಲಾಲಸಾ ಬಿದರಕೋಟಿ, ಅಜಮೀರ ಸುಗಂಧಿ, ಲಾಳೆಸಾಬ ಇಸ್ಲಾಂಪೂರ, ಬುಡ್ಡೇಸಾಬ ತಂಗಡಗಿ, ಜಾಕೀರ ಬಾವಿಮನಿ, ಸಾಹೇಬಲಾಲ ಕಸ್ಸಾಬ ಇದ್ದರು.

## ಪತಿಯನ್ನೆ ಕೊಲೆಗೈದ ಪತ್ನಿ



ದಾವಣಗೆರೆ: ಮಾ. 23 ರಂದು ದಾವಣಗೆರೆ ರಿಂಗ್ ರಸ್ತೆಯಲ್ಲಿ ಮಹಾಂತೇಶ್ (35) ಎಂಬ ವ್ಯಕ್ತಿಯ ಬರ್ಬರ ಹತ್ಯೆ ಪ್ರಕರಣದ ಸತ್ಯ ತನಿಖೆಯಿಂದ ಹೊರಬಿದ್ದಿದೆ. ಪತ್ನಿ ಶ್ವೇತಾ (27) ಸಂಚು ರೂಪಿಸಿ ಪ್ರಿಯಕರ ಚಂದ್ರಶೇಖರ್ (28) ಜೊತೆ ಸೇರಿ ಹತ್ಯೆ ಮಾಡಿರುವುದಾಗಿ ತನಿಖೆ ವೇಳೆ ಒಪ್ಪಿಕೊಂಡಿದ್ದಾಳೆ. ಆರೋಪಿ ಚಂದ್ರಶೇಖರ್ ರಾತ್ರಿ ವೇಳೆ ಮಹಾಂತೇಶ್ನನ್ನ ಕರೆದುಕೊಂಡು ಹೋಗಿ ಮದ್ಯದಲ್ಲಿ ನಿದ್ರೆ ಮಾತ್ರೆ ಸೇರಿಸಿ ಕುಡಿಸಿ ಹತ್ಯೆ ಮಾಡಿದ್ದ. ನಂತರ ಶವದ ಮೇಲೆ ಕಾರದಪುಡಿ ಹಾಕಿ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕುತ್ತಿಗೆ ಕತ್ತರಿಸಿದ್ದ.

ಹತ್ಯೆಯಾದ ಮಹಾಂತೇಶ್ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಬೈಚವಳ್ಳಿ ಗ್ರಾಮದ ನಿವಾಸಿ. ದಾವಣಗೆರೆಯಲ್ಲಿ ಕಟಿಂಗ್ ಶಾಪ್ನಲ್ಲಿ ಕೆಲಸ ಮಾಡುತ್ತಿದ್ದ. ಶ್ವೇತಾ, ಬಾಲ್ಯ ಸ್ನೇಹಿತ ಚಂದ್ರಶೇಖರ್ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಳು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ವಿದ್ಯಾನಗರ ಠಾಣೆ ಪೊಲೀಸರು ಕೊಲೆ ರಹಸ್ಯವನ್ನು ಬಯಲಿಗೆಳೆದಿದ್ದಾರೆ.

## ಮೂವರು ಯುವಕರು ಸಾವು



ಚಿತ್ರದುರ್ಗ: ಕೆರೆಯಲ್ಲಿ ಈಜಲು ಹೋಗಿದ್ದ ಮೂವರು ಯುವಕರು ನೀರು ಪಾಲಾದ ಘಟನೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ನಂದನಹೊಸೂರು ಗ್ರಾಮ ಬಳಿಯ ಕೆರೆಯಲ್ಲಿ ನಡೆದಿದೆ. ಒಟ್ಟು ಐವರು ಈಜಲು ಹೋಗಿದ್ದು ಮೂವರು ನೀರುಪಾಲಾಗಿ ಇಬ್ಬರು ಪ್ರಾಣಾಪಾಯದಿಂದ ಬದುಕುಳಿದಿದ್ದಾರೆ.

ನಂದನಹೊಸೂರು ಗ್ರಾಮದ ನಿವಾಸಿ ಗಿರೀಶ್(18), ಹೊರಕೆರೆದೇವರಪುರ ಗ್ರಾಮದ ಸಂಜಯ್(18), ಕಣಿವೆ ಜೋಗಿಹಳ್ಳಿ ಗ್ರಾಮದ ಮನು(19) ಮೃತರು. ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಐವರು ಯುವಕರು ಪಿಯುಸಿ ಪರೀಕ್ಷೆಯನ್ನು ಮುಗಿಸಿ ಊರಿಗೆ ಬಂದಿದ್ದರು. ರಜೆ ಇದ್ದ ಕಾರಣ ಸ್ನೇಹಿತರೆಲ್ಲ ಸೇ–ರಿಕೊಂಡು ಗುಂಡಿ ಕೆರೆಯಲ್ಲಿ ಈಜಲು ಹೋಗಿದ್ದರು. ಈ ವೇಳೆ ಕೆರೆಯ ಆಳ ತಿಳಿಯದೆ ಈಜಾಡಲು ಇಳಿದಿದ್ದು ಮುಳುಗಿದ್ದಾರೆ. ದಡ ಸೇರಲು ಸಾಧ್ಯವಾಗದೇ ಐವರಲ್ಲಿ ಮೂವರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇನ್ನಿಬ್ಬರು ಅಪಾಯದಿಂದ ಪಾರಾಗಿದ್ದಾರೆ. ಸಾವಿನ ಸುದ್ದಿ ಕೇಳುತ್ತಿದ್ದಂತೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಪೊಲೀಸ್ ಇಲಾಖೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಕೆರೆಯಿಂದ ಹೊರತೆಗೆದಿದ್ದು, ವಿಷಯ ತಿಳಿಯುತ್ತಿದ್ದಂತೆ ನೂರಾರು ಗ್ರಾಮಸ್ಥರು ಸ್ಥಳಕ್ಕೆ ದೌಡಾಯಿಸಿದ್ದಾರೆ.

# ಧಾರವಾಡದ ಕಲ್ಲೂರಿನಲ್ಲಿ ಮೈ ಮನ ನವಿರೇಳಿಸಿದ ಭಾರೀ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿ



ಧಾರವಾಡ: ತಾಲೂಕಿನ ಕಲ್ಲೂರ ಗ್ರಾಮದಲ್ಲಿ ಈ ತಿಂಗಳ 25 ರಂದು ಶೋಭಕೃತ ನಾಮ ಸಂವತ್ಸರದ ಚೈತ್ರಮಾಸ ಯುಗಾದಿ ಪ್ರತಿಪದ ಹಬ್ಬದ ಪ್ರಯುಕ್ತ ಶ್ರೀ ಗ್ರಾಮದೇವಿ ಉಡ–ಚಮ್ಮದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ಪ್ರಸಿದ್ಧ ಪೈಲವಾನರ ಭಾರಿ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿ, ಜೈ ಹನುಮಾನ್ ಕುಸ್ತಿ ಸಂಘ ಕಲ್ಲೂರ್ 13 ವರ್ಷದಿಂದ ಯಶಸ್ವಿ ಸಂಘಟನೆ ನಡೆಯುತ್ತಿದೆ.ಗ್ರಾಮದ ಕುವೆಂಪು ಶತಮಾನೋತ್ಸವ ಸರಕಾರಿ ಮಾದರಿ ಶಾಲೆ ಮೈದಾನದಲ್ಲಿ ನಡೆದ ಕುಸ್ತಿಯಲ್ಲಿ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಒಟ್ಟು 56 ಪುರುಷ ಜೋಡಿಗಳು, 5 ಜೋಡಿ ಮಹಿಳೆಯರು ಕುಸ್ತಿ ಪಂದ್ಯದಲ್ಲಿ ಭಾಗವಹಿಸಿ, ತಮ್ಮ ಶಕ್ತಿ ಸಾರ್ಮರ್ಥ್ಯವನ್ನು ಒರೆಗೆ ಹಚ್ಚಿದರು. ಮಹಿಳಾ ವಿಭಾಗದಲ್ಲಿ,ಶ್ವೇತಾ ಹನ್ನಿಕೇರಿ, ಕಾವ್ಯ ದನವೇ ನವರ್ ,ಪುಷ್ಪ ನಾಯಕ್ ವಿಜೇತರಾದರು.

ಪುರುಷರ ವಿಭಾಗದಲ್ಲಿ, ಸಿಕಂದರ್ ಶೇಕ್ ಸೋಲಾಪುರ್ ಪ್ರವೀಣ್ ಬೋಲಾ ನಡುವೆ ರೋಚಕ ಕುಸ್ತಿ ನಡೆಯಿತು. ವಿಜೇತರಾದ ಸಿಕಂದರ್ ಶೇಕ್ ಸೊಲ್ಲಾಪುರ್ ಉಪ ಮಹಾರಾಷ್ಟ್ರ ಕೇಸರಿ ರಾಷ್ಟ್ರೀಯ ಚಾಂಪಿಯನ್ ಇವರಿಗೆ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ, ನವ ಭಾರತ ನಿರ್ಮಾಣದ ಪ್ರಧಾನಮಂತ್ರಿ ನರೇಂದ್ರ ಮೋದಿಜಿ ಅವರ ಜೀವನ ಚರಿತ್ರೆಯ ಪುಸ್ತಕ ಹಾಗೂ 101101 ಗೌರವಧನ ನೀಡಿ ಜೈ ಹನುಮಾನ್ ಕುಸ್ತಿ ಸಂಘದ ಅಧ್ಯಕ್ಷರಾದ ಲಿಂಗರಾಜ್ ಹಡಪದ್, ಮುಖಂಡ ಕಲಂದರ್ ಮುಲ್ಲಾ, ಮಡಿವಾಳಪ್ಪ ಬುಡ್ರಕಟ್ಟಿ, ಅಹಮದ್ ಗೌಸ್ ಸೈಯದ್ ನವರ, ಬಸ್ಸು ದಂಡಿನ ಸಂಘದ ಎಲ್ಲ ಸದಸ್ಯರು ಸನ್ಮಾನಿಸಿ ಗೌರಿಸಿದರು, ಮೈ ಮನ ನವಿರೇಳಿಸುವ ಕುಸ್ತಿಯನ್ನು ಕಣ್ಣು ತುಂಬಿಸಿಕೊಳ್ಳಲು ಧಾರವಾಡ ತಾಲೂಕಿನ ನಾನಾ ಭಾಗಗಳಿಂದ ಸಾವಿರಾರು ಕುಸ್ತಿ ಅಭಿಮಾನಿಗಳು ಆಗಮಿಸಿದ್ದರು.

ಕುಸ್ತಿಪಟುಗಳು ಚಿತ್ ಪಟ್ ಆಗುವ ವೇಳೆಯಲ್ಲಿ ಸಿಳ್ಳೆ, ಚಪ್ಪಾಳೆ ಹಾಗೂ ಮಹಾರಾಷ್ಟ್ರ ಕುರಂದವಾಡ ಹಲಗಿ ವಾದನ ಮುಗಿಲು ಮುಟ್ಟಿದ್ದವು.

ಕುಸ್ತಿಪಟುಗಳಿಗೆ ಕ್ರೀಡಾಭಿಮಾನಿಗಳು ಅತ್ಯುತ್ತಮ ಪ್ರೋತ್ಸಾಹ ನೀಡಿ ಹು–ರಿದುಂಬಿಸಿದರು.ಇದಕ್ಕೂ ಮುನ್ನ ಕುಸ್ತಿ ಪಂದ್ಯಾವಳಿಯನ್ನು ಅಂಜುಮನ್ ಇಸ್ಲಾಂ ಸಂಸ್ಥೆ ಮಾಜಿ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ, ಜನಜಾಗೃತಿ ಸಂಘದ ಅಧ್ಯಕ್ಷರಾದ ಕೊರವರ,ಬಳಿಕ ಮಾತನಾಡಿದ ಪಂದ್ಯಾವಳಿ ಗ್ರಾಮೀಣ ಭಾಗದ ಸೊಗಡು. ಅದನ್ನು ಉಳಿಸಿ ಬೆಳಸುವ ಕೆಲಸವಾಗಬೇಕಿದೆ.

ಈ ಹಿಂದೆ ಪ್ರತಿ ಹಳ್ಳಿಗಳಲ್ಲಿದ್ದ ಗರಡಿ ಮನೆಗಳು ಮತ್ತೆ ಮುನ್ನಲೆಗೆ ತರಬೇಕು. ಹಿರಿಯ ಪೈಲ್ವಾಲರುಗಳು ಯುವ ಪಿಳಿಗೆಗೆ ಅದನ್ನು ಸಮಥ–ರ್ಥವಾಗಿ ಪರಿಚಯಿಸಬೇಕು ಎಂದು ಸಲಹೆ ನೀಡಿದರು.ಇದೇ ಸಂದರ್ಭದಲ್ಲಿ ಕಲ್ಲೂರು ಗ್ರಾಮದ ಮಾಜಿ ಮತ್ತು ಹಾಲಿ ಸೈನಿಕರಿಗೆ ಸನ್ಮಾನಿಸಿ ಗೌರಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ, ಗುರುಪಾದಪ್ಪ ದಂಡಿನ,ಅಶೋಕ್ ದೇಸಾಯಿ, ಮಹಾವೀರ ಅಷ್ಟಗಿ, ಪಾಂಡುರಂಗ ನೀರಲಕೇರಿ, ಗೀತಾ ಧರೆನವರ್, ನಾಗನಗೌಡ ಪಾಟೀಲ್, ಮಾದೇವ ದಂಡಿನ್, ವೀರಣ್ಣ ಏಳಲ್ಲಿ, ವಿಠ್ಠಲ್ ಬಾರಕೇರ, ಮಂಜುನಾಥ್ ಸಂಕಣ್ಣವರ, ಶಿವಾನಂದ ಹೊಸಮನಿ, ಅಡಿವೆಪ್ಪ ಮರಗಾಲ್, ಗುರುಸಿದ್ದಪ್ಪ ಎಳಲ್ಲಿ, ಬಸಣ್ಣ ಮರಲಿಂಗನವರ, ವಿಟ್ಟಪ್ಪ ಬ್ಯಾಟಗೇರ, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.ಪರಮೇಶ್ವರ ಹಡಪದ ಕಾರ್ಯಕ್ರಮದ ನಿರೂಪಣೆ ಮಾಡಿದರು.

# ನೀತಿ ಸಂಹಿತೆ ಉಲ್ಲಂಘಿಸಿದರೆ ಕಠಿಣ ಕ್ರಮ: ಡಿಸಿ ನಿತೇಶ್ ಪಾಟೀಲ



ಬೆಳಗಾವಿ: ಕರ್ನಾಟಕ ವಿಧಾನಸಭಾ ಚುನಾವಣೆಯ ನೀತಿಸಂಹಿತೆ ಇಂದಿನಿಂದಲೇ ಜಾರಿಗೆ ಬಂದಿರುವುದ–ರಿಂದ ಸಾರ್ವಜನಿಕ ಸ್ಥಳದಲ್ಲಿರುವ ಎಲ್ಲ ಪೋಸ್ಟರ್, ಬ್ಯಾನರ್, ಗೋಡೆಬರಹಗಳನ್ನು ತೆರವುಗೊಳಿಸಬೇಕು. ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಲಾಗಿರುವ ಎಲ್ಲ ತಂಡಗಳು ತಕ್ಷಣವೇ ಕಾರ್ಯಪ್ರವೃತ್ತಗೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಎಚ್ಚರಿಕೆ ನೀಡಿದರು.

ವಿಧಾನಸಭಾ ಚುನಾವಣಾ ದಿನಾಂಕ ಪ್ರಕಟಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ಚುನಾವಣಾಧಿಕಾರಿಗಳ ಹಾಗೂ ನೋಡಲ್ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಮತಗಟ್ಟೆಗಳಲ್ಲಿ ಕನಿಷ್ಠ ಮೂಲಸೌಕರ್ಯವನ್ನು ಒದಗಿಸಬೇಕು. ಸಂಬಂಧಿಸಿದ ಮತಗಟ್ಟೆಗಳ ವ್ಯಾಪ್ತಿಯ ಸೆಕ್ಟರ್ ಅಧಿಕಾ–ರಿಗಳು ಕಡ್ಡಾಯವಾಗಿ ಮತಗಟ್ಟೆಗಳಿಗೆ ಭೇಟಿ ಮೂಲಸೌಕರ್ಯವನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಮಾದರಿ ನೀತಿಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ವರದಿಯಾದಲ್ಲಿ ಕೂಡಲೇ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಸಂಬಂಧಿಸಿದ ವ್ಯಕ್ತಿ ಮೇಲೆ ಪ್ರಕರಣ ದಾಖಲಿಸಲು ಸೂಚನೆ: ನಗದು, ಮದ್ಯ, ಉಡುಗೊರೆ ಮತ್ತಿತರ ವಸ್ತುಗಳ ಅಕ್ರಮ ಸಾಗಾಣಿಕೆ ಮೇಲೆ ತೀವ್ರ ನಿಗಾವಹಿಸಬೇಕು. ಈ ರೀತಿಯ ಅಕ್ರಮ ಸಾಗಾಣಿಕೆ ವೇಳೆ ವಶಪಡಿಸಿಕೊಂಡ ವಸ್ತುಗಳ ಮೇಲೆ ಯಾವುದೇ ಪಕ್ಷ ಅಥವಾ ವ್ಯಕ್ತಿಗಳ ಭಾವಚಿತ್ರಗಳಿದ್ದರೆ ಅಂತಹವರ ವಿರುದ್ಧ ಪ್ರಕರಣ ದಾಖಲಿಸಬೇಕು. ಭಾವಚಿತ್ರವಿರುವ ಅಥವಾ ಪಕ್ಷದ ಚಿಹ್ನೆ ಕಂಡುಬಂದಾಗ ಸಂಬಂಧಿಸಿದವರನ್ನೇ ಮೊದಲ ಆರೋಪಿಯನ್ನಾಗಿಸಬೇಕು. ವಾಹನ ಚಾಲಕರು ಮತ್ತಿತರ ವ್ಯಕ್ತಿಗಳನ್ನು ಎರಡು, ಮೂರನೇ ಆರೋಪಿಗಳನ್ನಾಗಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಚುನಾವಣಾ ಪ್ರಚಾರ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಪರವಾನಿಗೆಯನ್ನು ನೀಡಲು ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆಯನ್ನು ಆರಂಭಿಸಬೇಕು. ನೀತಿ ಸಂಹಿತೆ ಜಾರಿಗೆ ಬಂದಿರುವುದರಿಂದ ಮೊದಲ 24 ಗಂಟೆ ಅತ್ಯಂತ ಪ್ರಮುಖವಾಗಿದೆ. ಸಂಬಂಧಿಸಿದ ಮತಕ್ಷೇತ್ರಗಳ ಚುನಾವಣಾಧಿಕಾ–ರಿಗಳು ತಕ್ಷಣವೇ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯನ್ನು ಕರೆದು ಅಗತ್ಯ ಮಾಹಿತಿಯನ್ನು ನೀಡಬೇಕು. ಎಲ್ಲ ಪ್ರವಾಸಿಮಂದಿರದ ಕೊಠಡಿಗಳನ್ನು ತೆರವುಗೊಳಿಸಿ ಸಂಬಂಧಿಸಿದ ಚುನಾವಣಾಧಿಕಾರಿಗಳ ಸುಪರ್ದಿಗೆ ಪಡೆದುಕೊಳ್ಳಬೇಕು. ಅನಧಿಕೃತ ವ್ಯಕ್ತಿಗಳಿಗೆ ಅಥವಾ ಸಭೆಗಳಿಗೆ ಯಾವುದೇ ಕಾರಣ–ಕ್ಕೂ ಅವಕಾಶ ನೀಡಬಾರದು. ಮಾದರಿ ನೀತಿಸಂಹಿತೆ ಉಲ್ಲಂಘನೆ ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಎಂದರು.

ಬೆಳಗಾವಿ ನಗರ ಪೊಲೀಸ್ ಆಯುಕ್ತರಾದ ಡಾ. ಎಂ.ಬಿ.ಬೋರಲಿಂಗಯ್ಯ ಮಾತನಾಡಿ, ಅಕ್ರಮ ನಗದು, ಮದ್ಯ ಮತ್ತಿತರ ವಸ್ತುಗಳ ಸಾಗಾಣಿಕೆ ಮೇಲೆ ನಿಗಾ ವಹಿಸಬೇಕು ಎಂದು ತಿಳಿಸಿದರು. ಚೆಕ್ ಪೋಸ್ಟ್ ಗಳಲ್ಲಿ ತಪಾಸಣೆ ಚುರುಕುಗೊಳಿಸಿದಷ್ಟು ಅಕ್ರಮಗಳನ್ನು ತಡೆಗಟ್ಟಲು ಅನುಕೂಲವಾಗುತ್ತದೆ.

ಆದ್ದರಿಂದ ವಾಹನಗಳನ್ನು ಸಮರ್ಪಕವಾಗಿ ತಪಾಸಣೆ ಮಾಡಬೇಕು ಎಂದು ಸೂಚನೆ ನೀಡಿದರು. ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಪರವಾನಿಗೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ಅವರು ಮಾತನಾಡಿ, ಚುನಾವಣಾ ಕರ್ತವ್ಯಕ್ಕೆ ನಿಯೋಜಿತ ಅಧಿಕಾರಿಗಳು/ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧ–ರಿಸಿರಬೇಕು. ಇದರಿಂದ ಅಧಿಕೃತ ಮತ್ತು ಅನಧಿಕೃತ ವ್ಯಕ್ತಿಗಳನ್ನು ಗುರುತಿಸಲು ಅನುಕೂಲವಾಗುತ್ತದೆ. ಚುಮಾವಣೆಗೆ ಹಾಗೂ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ಸುಳ್ಳು ಸುದ್ದಿಗಳು ಕಂಡುಬಂದರೆ ಚುನಾವಣಾಧಿಕಾರಿಗಳು ಕೂಡಲೇ ದೂರ ದಾಖಲಿಸಬೇಕು. ಚೆಕ್ ಪೋಸ್ಟ್ ಗಳಲ್ಲಿ ನಿಯೋಜಿತ ತಂಡಗಳು ತೀವ್ರ ನಿಗಾ ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಲ್ ಭೋಯರ್, ಮಾದರಿ ನೀತಿಸಂಹಿತೆ ಪಾಲನೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ವಿವಿಧ ಮತಕ್ಷೇತ್ರಗಳ ಚುನಾವಣಾಧಿಕಾರಿಗಳು, ವಿವಿಧ ಸಮಿತಿಗಳ ನೋಡಲ್ ಅಧಿಕಾ–ರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

### ಸಚಿವ ಗಡ್ಕರಿಗೆ ಜೀವ ಬೆದರಿಕೆ ಪ್ರಕರಣ

## ಹಿಂಡಲಗಾ ಜೈಲಿನ ಕೈದಿ ವಶಕ್ಕೆ




ಬೆಳಗಾವಿ: ಕೇಂದ್ರ ಸಚಿವ ನಿತಿನ್ ಗಡ್ಕರಿಯವರಿಗೆ ಜೀವ ಬೆದ–ರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಹಿಂಡಲಗಾ ಜೈಲಿನ ಕೈದಿಯನ್ನು ಮಹಾರಾಷ್ಟ್ರ ಪೊಲೀಸರು ವಶಕ್ಕೆ ಪಡೆದು ಕರೆದೊಯ್ದಿದ್ದಾರೆ.

ಜಯೇಶ್ ಕಾಂತಾ ಅಲಿಯಾಸ್ ಜಯೇಶ್ ಪೂಜಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಾ.21ರಂದು ಮಹಾರಾಷ್ಟ್ರದ ನಾಗ್ಪುರದ ಸಚಿವರ ಕಚೇರಿಗೆ ಕರೆ ಮಾಡಿ ಕೈದಿಯ ಹೆಸರಿನಲ್ಲಿ ಜೀವ ಬೆದರಿಕೆ ಒಡ್ಡಲಾಗಿತ್ತು.

ಈ ಹಿಂದೆ ಸಹ ಜ.14ರಂದು ಸಚಿವರ ಕಚೇರಿಗೆ ಕರೆ ಮಾಡಿ ಜೀವ ಬೆದರಿಕೆ ಹಾಕಿ 10 ಕೋಟಿ ರೂಪಾಯಿ ಹಣಕ್ಕೆ ಬೇಡಿಕೆ ಇಡಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸರು ಹಿಂಡಲಗಾ ಜೈಲಿಗೆ ಭೇಟಿ ನೀಡಿ ಹಲವು ಬಾರಿ ತನಿಖೆ ನಡೆಸಿದ್ದರು.

## ಇಂದು ಶ್ರೀ ಸಿದ್ದಲಿಂಗೇಶ್ವರ ಜಾತ್ರಾ ಮಹೋತ್ಸವ



ಮುಗಳಖೋಡ: ಪಟ್ಟಣದ ಪವಾಡ ಪುರುಷ ಶ್ರೀ ಯಲ್ಲಾಲಿಂಗ ಮಹಾಪ್ರಭುಗಳಿಗೆ ದೀಕ್ಷೆ ನೀಡಿದ ಲಚ್ಚಾಣ ಕಮರಿ ಮಠದ ಶ್ರೀ ಸಿದ್ದಲಿಂಗ ಮಹಾರಾಜರ ಜಾತ್ರಾ ಮಹೋತ್ಸವ ಇಂದು ಮತ್ತು ನಾಳೆ ಅತಿ ವಿಜೃಂಭಣೆಯಿಂದ ನಡೆಯಲಿದೆ.

ಮುಗಳಖೋಡ ಪಟ್ಟಣದ ಶ್ರೀಮಠದಲ್ಲಿ ಗುರುವಾರ ದಿನಾಂಕ 30 ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಸಿದ್ದಲಿಂಗೇಶ್ವರ ಹಾಗೂ ಶ್ರೀ ಯಲ್ಲಾಲಿಂಗೇಶ್ವರ ಕರ್ತೃ ಗದ್ದುಗೆ ಮಹಾರುದ್ರಾಭಿಷೇಕ, ಮಂಗಳಾರತಿ, ಕಾರ್ಯಕ್ರಮ ಜರುಗುವುದು. ಮುಂಜಾನೆ 10 ಗಂಟೆಗೆ ಪರಮ ಪೂಜ್ಯ ಶ್ರೀ ಷಡಕ್ಷರಿ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ಅಗ್ನಿಕುಂಡದಲ್ಲಿ ಹಾಯುವರು, ಅದೇ ದಿನ ಸಾಯಂಕಾಲ 5:00 ಗಂಟೆಗೆ ಶ್ರೀ ಸಿದ್ದಲಿಂಗೇಶ್ವರ ಪಲ್ಲಕ್ಕಿ ಉತ್ಸವದೊಂದಿಗೆ ಮಹಾ ರಥ–ೋತ್ಸವ ಜರುಗುವುದು. ನಂತರ ಸಾಯಂಕಾಲ 7 ಗಂಟೆಗೆ ಮದ್ದು ಸುಡುವ ಕಾರ್ಯಕ್ರಮ ನಡೆಯಲಿದೆ. ಶುಕ್ರವಾರ ದಿನಾಂಕ 31 ರಂದು ಸಾಯಂಕಾಲ 4:00 ಗಂಟೆಗೆ ಸುಪ್ರಸಿದ್ಧ ಪೈಲ್ವಾನರಿಂದ ಕುಸ್ತಿಗಳು ನಡೆಯುತ್ತವೆ. ಈ ಕಾರ್ಯಕ್ರಮದಲ್ಲಿ ನಾಡಿನ ಅನೇಕ ಶರಣ–ರು, ಮಠಾಧೀಶರು ಭಾಗವಹಿಸುವರು ಆಸ್ಥಾನದ ಗವಾಯಿಗಳಿಂದ ಸಂಗೀತ ಸೇವೆ ನಡೆಯುತ್ತದೆ. ಜಾತ್ರಾ ಮಹೋತ್ಸವಕ್ಕೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗೋವಾ ಸೇರಿದಂತೆ ನಾನಾ ರಾಜ್ಯಗಳಿಂದ ಸಾವಿರಾರು ಭಕ್ತರು ಆಗಮಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿ ಅಜ್ಜನ ಕೃಪೆಗೆ ಪಾತ್ರರಾಗಲಿದ್ದಾರೆ.

## ಬೆಳಗಾವಿಯಲ್ಲಿ 11ನೇ ಶತಮಾನದ ತೀರ್ಥಂಕರರ ಪ್ರತಿಮೆ ಪತ್ತೆ



ಬೆಳಗಾವಿ: ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನಲ್ಲಿ 11ನೇ ಶತಮಾನದ ಜೈನ ತೀರ್ಥಂಕರ ಶ್ರೀ ಪಾರ್ಶ್ವನಾಥರ ಮೂರ್ತಿ ಪತ್ತೆಯಾಗಿದೆ. ಹೆಬ್ಬಾಳ ಗ್ರಾಮದ ಜೈನ ಮಂದಿರದ ಬಳಿ ಅಡಿಪಾಯ ಕಾಮಗಾರಿ ನಡೆಯುತ್ತಿರುವಾಗ ಈ ಪ್ರತಿಮೆ ಪತ್ತೆಯಾಗಿದೆ.

ತೀರ್ಥಂಕರರ ಪ್ರತಿಮೆಯ ನೋಡಲು ಭಕ್ತರು ಮತ್ತು ಇತಿಹಾಸಕಾರರು ಗ್ರಾಮಕ್ಕೆ ಆಗಮಿಸುತ್ತಿದ್ದಾರೆ. ಹೆಬ್ಬಾಳ ಗ್ರಾಮದಲ್ಲಿ 1800 ರ ದಶಕದ ಉತ್ತರಾರ್ಧದಲ್ಲಿ ನಿರ್ಮಿಸಲಾದ ಜೈನ ದೇವಾಲಯವಿದೆ, ಅಲ್ಲಿ ಆದಿನಾಥ ತೀರ್ಥಂಕರರ ಪ್ರತಿಮೆ ಇದೆ.

ಈ ಗ್ರಾಮವು 10 ನೇ ಶತಮಾನದಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು ಎಂದು ಇತಿಹಾಸಕಾರರು ಹೇಳುತ್ತಾರೆ. ಅವರು ಈ ಪ್ರದೇಶದಲ್ಲಿ ಮತ್ತಷ್ಟು ಉತ್ಖನನಕ್ಕೆ ಒತ್ತಾಯಿಸುತ್ತಿದ್ದಾರೆ. ಗದಗದ ಇತಿಹಾಸ ತಜ್ಞ ಬಾಹುಬಲಿ ಹಂದೂರು ಹೇಳುವ ಪ್ರಕಾರ, ಹೆಬ್ಬಾಳದ ದೇವಸ್ಥಾನ ಪ್ರದೇಶದಲ್ಲಿ 11ನೇ ಶತಮಾನದಷ್ಟು ಹಳೆಯದಾಗಿದ್ದು, ಎರಡನೇ ಬಾರಿ ಪ್ರತಿಮೆ ಪತ್ತೆಯಾಗಿದೆ. ಇದಕ್ಕೂ ಮೊದಲು, 11 ನೇ ಶತಮಾನದ ಮತ್ತೊಂದು ಪ್ರತಿಮೆಯು ಇಲ್ಲಿ ಸಿಕ್ಕಿತ್ತು, ಇದನ್ನು ಮಹಾರಾಷ್ಟ್ರದ ಕೊಥಲಿಯಲ್ಲಿರುವ ಜೈನ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಹೆಬ್ಬಾಳ ಗ್ರಾಮವು ಮಧ್ಯಕಾಲೀನ ಕಾಲದಿಂದಲೂ ಪ್ರಮುಖ ಜೈನ ಕೇಂದ್ರವಾಗಿ–ತ್ತು. ಚಾಲುಕ್ಯ ರಾಜರ ಅಧೀನದ ಪ್ರದೇಶವು 850 ಐ ಮತ್ತು 1230 ಐ ನಡುವೆ ಸವದತ್ತಿ ರಟ್ ಕುಟುಂಬದಿಂದ ಆಳಲ್ಪಟ್ಟಿತು. ಕುಟುಂಬವು ಜೈನ ಧರ್ಮವನ್ನು ಸ್ವೀಕ–ರಿಸಿತು, ಈ ಪ್ರದೇಶದ ಪ್ರತಿ ಹಳ್ಳಿಯಲ್ಲಿ ದೇವಾಲಯಗಳನ್ನು ನಿರ್ಮಿಸಿತು. ಬೆಳಗಾವಿ ಜಿಲ್ಲೆಯಲ್ಲಿ ಜೈನ ಧರ್ಮದ ಶ್ರೀಮಂತ ಸಂಪ್ರದಾಯವನ್ನು ಇಂದಿಗೂ ಕಾಣಬಹುದು ಎಂದು ಹಂದೂರು ಹೇಳಿದರು.

ಪಾರ್ಶ್ವನಾಥನ ಪ್ರತಿಮೆಯ ಪತ್ತೆಯು ಇಲ್ಲಿ ಹಿಂದೆ ದೇವಾಲಯವಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಬಹುಶಃ ದೇವಾಲಯವನ್ನು ನಾಶಪಡಿಸಲಾಗಿದೆ ಎಂದ ವಿವರಿಸಿದರು. ಈಗಿನ ಪ್ರತಿಮೆಯು ಸುಂದರವಾದ ಪ್ರಭಾವಳಿಯನ್ನು ಹೊಂದಿದೆ (ಪ್ರತಿಮೆಗಳ ಸುತ್ತಲೂ ಅಲಂಕಾ–ರಿಕ ಉಂಗುರ). ಪ್ರತಿಮೆಯ ಉದ್ದವು 2.5 ಅಡಿಗಳಿದೆ.

ಪ್ರತಿಮೆಯ ತಯಾರಕರು ಪಾರ್ಶ್ವನಾಥ ಪೂರ್ಣದ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದರು, ಅದು ಅದನ್ನು ತಯಾ–ರಿಸಿದ ವಿಧಾನದಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ಮತ್ತಷ್ಟು ಉತ್ಖನನ ಮತ್ತು ಪ್ರತಿಮೆಗಳ ದಾಖಲಾತಿ ಅಗತ್ಯವಿದೆ ಹಂದೂರ್ ಹೇಳಿದ್ದಾರೆ.

## ವಿದ್ಯಾರ್ಥಿ ಸ್ನೇಹಿಯಾಗಿ ಎಸ್ಎಸ್ಎಲ್ಸಿ ಪರೀಕ್ಷೆ: ಮೋಹನ ದಂಡಿನ



ಹುಕ್ಕೇರಿ: ರಾಜ್ಯಾದ್ಯಾಂತ ಮಾರ್ಚ 31 ರಿಂದ ಜರಗಲಿರುವ ಎಸ್ ಎಸ್ ಎಲ್ ಸಿ ಪರಿಕ್ಷೇಗಳನ್ನು ಹುಕ್ಕೇರಿ ತಾಲೂಕಿನಲ್ಲಿ ವಿದ್ಯಾರ್ಥಿ ಸ್ನೇಹಿ ಯಾಗಿ ನಡೆಸಲಾಗುವದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ ದಂಡಿನ ಹೇಳಿದರು.

ಅವರು ಇಂದು ಮಾಧ್ಯಮಗಳೊಂದಿಗೆ ಮಾತನಾಡುತ್ತಾ ಮಾರ್ಚ 31 ರಿಂದ ಏಪ್ರಿಲ್ 15 ವರಗೆ ಜರಗಲಿರುವ ಎಸ್ ಎಸ್ ಎಲ್ ಸಿ ಪರಿಕ್ಷೇಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಎಲ್ಲ ಸಿದ್ದತೆ ಮಾಡಿಕೋಳ್ಳಲಾಗಿದೆ ತಾಲೂಕಿನಲ್ಲಿ ಒಟ್ಟು 6815 ವಿದ್ಯಾರ್ಥಿಗಳು ಪರಿಕ್ಷೆ ಬರೆಯಲಿದ್ದು ಅವರಿಗಾಗಿ 26 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ, ಹಾಗೂ 529 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವಾಗ ಮೊಬೈಲ್ ಪೋನ್, ಸ್ಮಾರ್ಟ ವಾಚ್ ಇನ್ನಿತರ ಇಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ ,ವಿದ್ಯಾರ್ಥಿಗಳು ಭಯವಿಲ್ಲದೆ ಮುಕ್ತವಾಗಿ ವಿದ್ಯಾರ್ಥಿ ಸ್ನೇಹಿ ಯಾಗಿ ಪರಿಕ್ಷೇಗಳನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಂಪನ್ಮೂಲ ಅಧಿಕಾರಿ ಎ ಎಸ್ ಪದ್ಮಣ್ಣವರ,ಜಿಲ್ಲಾ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಪಿ ಡಿ ಪಾಟೀಲ, ತಾಲೂಕಾ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಮ್ ಎ ಉಮರಾಣಿ, ಮುಖ್ಯ ಶಿಕ್ಷಣ ಸಂಚಾಲಕ ಶ್ರೀಶೈಲ್ ಹಿರೇಮಠ ಉಪಸ್ಥಿತರಿದ್ದರು.

## ಡಾ.ಅಂಬೇಡ್ಕರ್ ಜನ್ಮ ದಿನಾಚರಣೆ ಪೂರ್ವಭಾವಿ ಸಭೆ



ಹುಕ್ಕೇರಿ: ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಮಹನೀಯರು ಹುಟ್ಟು ಹಬ್ಬಗಳನ್ನು ಶಾಂತ ರೀತಿ, ಸರಳವಾಗಿ ಆಚರಿಸೋಣವೆಂದು ತಹಶಿಲ್ದಾರ ಸಂಜಯ ಇಂಗಳೆ ತಿಳಿಸಿದರು.

ಪಟ್ಟಣದಲ್ಲಿ ಡಾ.ಬಾಬು ಜಗಜೀವನ ರಾಮ ಮತ್ತು ಡಾ.ಬಿ ಆರ್ ಅಂಬೇಡ್ಕರ್ ರವರ ಜನ್ಮ ದಿನಾಚರಣೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿಮಾತನಾಡಿದರು. ಚುನಾವಣಾ ನೀತಿ ಸಂಹಿತೆ ಕಾರಣ ಜಿಲ್ಲಾ ಮಟ್ಟದಲ್ಲಿ ನಡೆಯುವ ಕಾರ್ಯಕ್ರಮ ನಡೆಯುವ ಪರಿಸ್ಥಿತಿ ಅನುಗುಣವಾಗಿ

ಏಪ್ರಿಲ್ 5 ರಂದು ಹಸಿರುಕ್ರಾಂತಿ ಹರಿಕಾರ ಡಾ ಬಾಬು ಜಗಜೀವನ ರಾಮ್ ಜನ್ಮ ದಿನಾಚರಣೆ ಜಗಜೀವರಾವ ಭವನದಲ್ಲಿ ಆಚರಿಸಲಾಗುವದು. ಏಪ್ರಿಲ್ 14 ರಂದು ಸಂವಿಧಾನ ಶಿಲ್ಪಿ ಡಾ.ಬಿ ಆರ್ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ವೇದಿಕೆಯ ಕಾರ್ಯಕ್ರಮ, ಉಪನ್ಯಾಸ ಉಹಾಗೂಅ–ಡವಿಸಿದ್ದೇಶ್ವರ ಮಠದಿಂದ ಭಾವ ಚಿತ್ರದ ಮೆರವಣಿಗೆ ನಡೆಸಲಾಗುವದು ಎಂದರು.

ಸಿಪಿಐ ರಫೀಕ್ ಮಹ್ಮದ ತಹಶಿಲ್ದಾರ ,ತಾಲುಕಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ವಿಲಾಸ ರಾಜ ,ಎಸ್.ಸಿ ಎಸ್ ಟಿ ದೌರ್ಜನ್ಯ ನಿಯಂತ್ರಣ ಜಿಲ್ಲಾ ಸಮಿತಿಯ ಸದಸ್ಯ ಸುರೇಶ್ ತಳವಾರ ಸಮಾಜಕಲ್ಯಾಣಧಿಕಾರಿ ಹೆಚ ಎ.ಮಾಹುತ, ಮಾಹಿತಿ ನೀಡಿದರು.

ಎಲ್.ಬಿ ಮಾಲ್ದಾರ,ಎಲ್.ಬಿ ಜಕಬಾಳ,ಕೆ.ಬಿ ಪಾಟೀಲ.ಶ್ರೀದರ ನಡುಮನಿ.ಹೊಳೆಯಾಚೆ, ಬಿಇಓ ಮೋಹನ ದಂಡಿನ,ಕೃಷಿ ಸಹಾಯಕ ನಿರ್ದೇಶಕ ಮಹಾದೇವ ಪಟಗುಂದಿ,ಅರಣ್ಯ ಇಲಾಖೆಯ ಎಸ್. ಎಲ್ ನಾಯಿಕ ವಿದ್ಯುತ್ ಸಂಘದ ವ್ಯವಸ್ಥಾಪಕ ದುರದುಂಡಿ ನಾಯಿಕ, ಅಕ್ಷರದಾಸೋಹ ಸವಿತಾ ಹಲಕಿ, ತಾ.ಪಂ ಅಭಿಯಂತ ಪ್ರಸಾದ ನಾಯಕ, ಮುಖಂಡರಾದ ಅಣ್ಣಪ್ಪಾ ಖಾತೇದಾರ,ಕೆಂಪಣ್ಣ ಶಿರಹಟ್ಟಿ, ಪ್ರಕಾಶ ಮೈಲಾಖೆ, ಮಲ್ಲಿಕಾರ್ಜುನ ರಾಶಿಂಗೆ ಕೆ.ದೊಡಮನಿ,ಪಾಂಡ್ರೆ,ಮತ್ತಿತರರು ಉಪಸ್ಥಿತರಿದ್ದರು.

## 320 ಕೋಟಿ ರೂ ವೆಚ್ಚದ ಯೋಜನೆಗೆ ಚಾಲನೆ



ಹುಕ್ಕೇರಿ: ತಾಲೂಕಿನ ಬಹು ದಿನಗಳ ಬೇಡಿಕೆಯಾಗಿದ್ದ ಶ್ರೀ ಅಡವಿ ಸಿದ್ದೇಶ್ವರ ಮತ್ತು ಶಂಕರಲಿಂಗ ಏತ ನೀರಾವರಿ 320 ಕೋಟಿ ವೆಚ್ಚದ ಯೋಜನೆಗೆ ಚಾಲನೆ ನೀಡಲಾಯಿತು.

ಬುಧವಾರ ಮುಂಜಾನೆ ತಾಲೂಕಿನ ನೇರ್ಲಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಶಂಕರಲಿಂಗ ಯಾತ ನೀರಾವರಿಗೆ ಹಾಗೂ ಬೆಣ್ಣಿವಾಡ ಗ್ರಾಮದಲ್ಲಿ ಅಡವಿಸಿದ್ದೇಶ್ವರ ಯಾತ ನೀರಾವರಿಗೆ ಭೂಮಿ ಪೂಜೆ ನೆರವೇ–ರಿಸಲಾಯಿತು..

ಚುನಾವಣೆಯ ನೀತಿ ಸಂಹಿತೆ ಸನ್ನಿಹಿತ ಘೋಷಣೆಯಾಗುವ ಮುಂಚೆ ಮುಂಜಾನೆ ಭೂಮಿ ಪೂಜೆ ಮಾಡುವ ಮೂಲಕ ಚಾಲನೆ ನೀಡಲಾಯಿತು.

ಮಾಜಿ ಜಿಲ್ಲಾ ಪಂಚಾಯತ ಸದಸ್ಯ ಪವನ ಕತ್ತಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿ ಈ. ಭಾಗದ ರೈತ ಜನರ ನಾಡಿ ಮಿಡಿತ ಅರಿತಿದ್ದ ದಿ. ಉಮೇಶ್ ಕತ್ತಿಯವರ ವಿಶೇಷ ಆಸಕ್ತಿ ಯಿಂದ ಸಂಕೇಶ್ವರ ಮತ್ತು ಹುಕ್ಕೇರಿ ಪಟ್ಟಣಗಳ ಹತ್ತಿರದ ಗ್ರಾಮಗಳಾದ ಜಾಬಾಪೂರ, ಕೋಚರಿ, ಮಸರಗುಪ್ಪಿ, ನೇರ್ಲಿ, ಎಲಿಮುನ್ನೋಳ್ಳಿ, ಅರ್ಜುನವಾಡ ಗ್ರಾಮಗಳ ಮೂರು ಸಾವಿರ ಎಕರೆ ಜಮಿನಿಗೆ ಕೋಚರಿ ಬ್ಯಾರೆಜ ಹಾಗೂ ಶಿರಗಾಂವ.ರಕ್ಷಿ,ಮದಿಹಳ್ಳಿ,ಹುಕ್ಕೇರಿ ಸೇ–ರಿದಂತೆ ಮೂರು ಸಾವಿರ ಎಕರೆ ಪ್ರದೇಶಕ್ಕೆ ಯರನಾಳ ನೀರಾವರಿ ಸೌಲಭ್ಯ ಹೊಂದುವದರಿಂದ ರೈತರ ಜಮೀನ ಗಳು ನೀರಾವರಿ ಮತ್ತು ಭಾವಿ ಬೋರವೆಲ್ ಗಳು ಅಂತರಜಲ ಹೆಚ್ಚಾಗಿ ಪುನರ್ಜಿವ ಪಡೆಯುತ್ತವೆ ಎಂದರು.

ನೇರ್ಲಿ ಎಲಿಮುನ್ನೋಳ್ಳಿ, ಗ್ರಾಮ ಪಂಚಾಯತಿ ಸದಸ್ಯರು ಪವನ ಕತ್ತಿಯವ–ರಿಗೆ ಸತ್ಕರಿಸಿ ಅಭಿನಂದನೆ ಸಲ್ಲಿಸಿದರು. ನೀರಾವರಿ ಇಲಾಖೆಯ ಸಾಧಿಕ ಮುಲ್ಲಾ, ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಅಶೋಕ ಪಟ್ಟಣಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕ ಎಸ್.ಆರ್ ಕರ್ಕಿನಾಯಿಕ, ಮೀರಾಸಾಬ್ ಮುಲ್ತಾನಿ, ತಮ್ಮಣ್ಣಾ ಪಾಟೀಲ, ಈಶ್ವರ ಖೋತ, ಸಾಗರ ಜಾಧವ, ಭೀಮಗೌಡಾ ಪಾಟೀಲ, ಜಿನಗೌಡ ಇಮಗೌಡನವರ,ಕಲಗೌಡಾ ಪಾಟೀಲ, ರವಿ ಪಾಟೀಲ, ಶಿವನಗೌಡ ಪಾಟೀಲ,ನೆರ್ಲಿ, ಹಂಜ್ಯಾನಟ್ಟಿ, ಮಸರಗುಪ್ಪಿ, ಕೋಚರಿ, ಹುಕ್ಕೇರಿ, ಎಲಿಮುನ್ನೋಳಿ ಭಾಗದ ರೈತರು ಉಪಸ್ಥಿತರಿದ್ದರು.

**ರದ್ದು ಪಡಿಸಿದ ಕಾರ್ಯಕ್ರಮ:** ಎರಡು ಯಾತ ನೀರಾವರಿ ಯೋಜನೆ ಚಾಲನೆಗೆ ಗುರುವಾರ ನಿಗದಿಪಡಿಸಲಾಗಿತು. ಚುನಾವಣಾ ನೀತಿ ಸಂಹಿತೆ ಬರುವ ಸುಳಿವ ಅರಿತ ಸಂಘಟಕರು ಬೆಳಿಗ್ಗೆ ತರಾತುರಿಯಲ್ಲಿ ಚಾಲನೆ ನೀಡಿದರು.

## ಬಿರು ಬೇಸಿಗೆಗೆ ತಂಪು ಪಾನೀಯಗಳಿಗೆ ಮರುಳಾಗದಿರಿ: ಡಾ. ಸೌರಭ ಹಿರೇಮಠ



ಬೆಳಗಾವಿ: ಬೇಸಿಗೆ ಕಾಲದಲ್ಲಿ ವಿದೇಶಿ ತಂಪು ಪಾನೀಯಗಳಿಗೆ ಮರುಳಾಗದೆ ದೇಶೀಯ ಪಾನೀಯಗಳಾದ ಎಳನೀರು ನಿಂಬು ಶರಬತ್ ಮಜ್ಜಿಗೆ ದೇಹಕ್ಕೆ ತಂಪು ನೀಡುವ ಪಾನೀಯಗಳನ್ನು ಸೇವಿಸಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದು ಹೆಸರಾಂತ ವೈದ್ಯರಾದ ಡಾ.ಸೌರಬ ಹಿರೇಮಠ ಅವರು ಕೆ. ಎಲ್.ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆ ಹಾಗೂ ಬೆಳಗಾವಿ ಖಾನಾಪುರ ಹೆದ್ದಾರಿಯಲ್ಲಿರುವ ಲೋಕಮಾನ್ಯ ಮಲ್ಟಿಪರ್ಪಸಕೊ– ಆಪರೇಟಿವ್ ಸೊಸೈಟಿಯ ಖಾನಾಪುರ ಶಾಖೆ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಉದ್ಘಾಟನಾ ಅಂಗವಾಗಿ ಮಾತನಾಡುತ್ತಿದ್ದರು.

ಮನೆಯ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವದು ಹಾಗೂ ಗಟಾರಗಳಲ್ಲಿ ನೀರು ನಿಲ್ಲದಂತೆ ನೋಡಿ ಕೊಳ್ಳಬೇಕು ಇದರಿಂದ ಡೆಂಗ್ಯು ಮಲೇ–ರಿಯಾದಂತಹ ಮಾರಕ ರೋಗಗಳು ಬಾರದಂತೆ ತಡೆಹಿಡಿಯಬಹುದು ಎಂದು ತಿಳುವಳಿಕೆ ನೀಡಿದರು.

ಶಿಬಿರದಲ್ಲಿ 250 ಕ್ಕೂ ಅಧಿಕ ನಾಗರಿಕರನ್ನು ತಪಾಶಿಸಲಾಯಿತು.

ಅದರಲ್ಲಿ 80 ಜನ–ರಿಗೆ ಮೆಡಿಸಿನ ವಿಭಾಗದ ವೈದ್ಯರುತಪಾಸಣೆ ಮಾಡಿ 15 ಜನರಿಗೆ ಅತಿ ರಕ್ತದೊತ್ತಡ, 8 ಜನರಿಗೆ ಮಧುಮೇಹದ ಸಮಸ್ಯೆ, 37 ಜನರಿಗೆ ಎಲುಬು ಕೀಲು ವೈದ್ಯರಿಂದ ತಪಾಸಣೆ ಮಾಡಲಾಗಿ ಅದರಲ್ಲಿ 18 ಜನರಿಗೆ ಸಂಧಿವಾತ ಮತ್ತಿತರೆ ಸಮಸ್ಯೆಗಳಿರುವದು ತಿಳಿದುಬಂದಿತು.

42 ಜನರಿಗೆಕಣ್ಣಿನ ವೈದ್ಯರುತಪಾಸಣೆ ಮಾಡಲಾಗಿಅದರಲ್ಲಿ 13 ಜನ–ರಿಗೆ ಮೋತಿಬಿಂದು ಮತ್ತಿತರೆ ಸಮಸ್ಯೆಗಳಿರುವದು ತಿಳಿದುಬಂದಿತು, 18 ಜನಗರ್ಭಿಣಿಯರು ಮತ್ತು ಮಹಿಳೆಯರು ತಪಾಸಣೆಗೊಳಪಟ್ಟರು, ಶಸ್ತ್ರಚಿಕಿತ್ಸೆಯ ವಿಭಾಗದಲ್ಲಿ ಸುಮಾರು 20 ಜನರು ತಪಸಣೆ ಮಾಡಿಸಿಕೊಂಡರು.

ಚಿಕ್ಕಮಕ್ಕಳ ವೈದ್ಯರು 35 ಮಕ್ಕಳನ್ನು ತಪಾಸಣೆ ಮಾಡಿದರು. ಅದರಲ್ಲಿ 4 ಮಕ್ಕಳಿಗೆ ಅಪೌಷ್ಟಿಕತೆ ಮತ್ತಿತರೆ ಸಮಸ್ಯೆಗಳಿರುವದು ತಿಳಿದುಬಂದಿತು. ಈ ಎಲ್ಲ ನಾಗರಿಕರಿಗೆ ಆಸ್ಪತ್ರೆಯ ಅತ್ಯಲ್ಪದರದ ಸೇವೆಗಳನ್ನು ಉಪಯೋಗಿಸಿ ಕೊಳ್ಳಲು ಆಸ್ಪತ್ರೆಯ ನಿರ್ದೇಶಕರಾದ ಡಾ.ಎಸ್ ಸಿ ಧಾರವಾಡ ಅವರು ಸೂಚಿಸಿದ್ದಾರೆ.

ಶಿಬಿರದಲ್ಲಿ ವೈದ್ಯರುಗಳಾದ ಮೆಡಿಸಿನ್ ವಿಭಾಗದ ಹೆಸರಾಂತ ವೈದ್ಯರಾದ ಡಾ.ಸೌರಬ ಹಿರೇಮಠ, ಚಿಕ್ಕಮಕ್ಕಳ ವೈದ್ಯರಾದ, ಡಾ.ಬಸವರಾಜ–ಕುಡಸೋಮಣ್ಣವರ, ಹಿರಿಯ ಶಸ್ತ್ರಚಿಕಿತ್ಸಕರಾದಡಾ.ಶಶಿ ಉಪ್ಪಿನ, ಹೆಸರಾಂತ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆ ಡಾ.ಅಮೃತಾ ಸಾಲ್ಕರ ಹಾಗೂ ಎಲುಬು ಕೀಲು ವೈದ್ಯರಾದಡಾ. ಆನಂದಖಟವಿ ಮತ್ತು ಹೆಸರಾಂತಕಣ್ಣಿನ ತಜ್ಞರಾದ ಡಾ. ವಿಶಾಲ ಖಾಕಂಡಕಿಅವರು ಭಾಗವಹಿಸಿ ನಾಗರಿಕರನ್ನು ತಪಾಶಿಸಿ ಉಚಿತವಾಗಿ ಔಷಧಿಗಳನ್ನು ವಿತರಿಸಿದರು.

ಲೋಕಮಾನ್ಯ ಮಲ್ಟಿಪರ್ಪಸಕೊ–ಆಪರೇಟಿವ್ ಸೊಸೈಟಿಯಖಾನಾಪುರ ಶಾಖೆಯ ಮ್ಯಾನೇಜರ ಶ್ರೀ ಸಂಜಯ ಪಾಖರೆ ಹಾಗೂ ಅವರು ಸಿಬ್ಬಂದಿ ಮತ್ತುಖಾನಾಪುರ ಪಟ್ಟಣದ ನಾಗರಿಕರು ಭಾಗವಹಿಸಿದ್ದರು.

## ಮಹಾನಗರ ಪಾಲಿಕೆ: ಚುನಾವಣಾ ಮಾಹಿತಿಗಾಗಿ ಕಂಟ್ರೋಲ್ ರೂಂ ಸ್ಥಾಪನೆ

ಬೆಳಗಾವಿ: ಜಿಲ್ಲೆಯ ಎರಡು ವಿಧಾನಸಭಾ ಮತ ಕ್ಷೇತ್ರಗಳಾದ 11–ಬೆಳಗಾವಿ ಉತ್ತರ ಮತ್ತು 12–ಬೆಳಗಾವಿ ದಕ್ಷಿಣ ವಿಧಾನಸಭಾ ಮತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾರ್ವತ್ರಿಕ ವಿಧಾನಸಭಾ ಚುನಾವಣೆ 2023ರ ಕುರಿತಾಗಿ ದಿನಾಂಕ ಘೋಷಣೆಯಾಗುವ ಹಿನ್ನೆಲೆಯಲ್ಲಿ ಮತದಾರ–ರಿಗೆ ಅಗತ್ಯ ಮಾಹಿತಿ ನೀಡಲು ಬೆಳಗಾವಿ ಮಹಾನಗರ ಪಾಲಿಕೆಯ ಮುಖ್ಯ ಕಛೇರಿಯಲ್ಲಿ ಕಂಟ್ರೋಲ್ ರೂಂಗಳನ್ನು ಸ್ಥಾಪಿಸಲಾಗಿದೆ. ಸದರಿ ಮತಕ್ಷೇತ್ರಗಳಿಗೆ ದಿನದ 24 ಗಂಟೆಯೂ ಎರಡೂ ಮತಕ್ಷೇತ್ರಗಳ ಮತದಾರರಿಗೆ ಹಾಗೂ ಸಾರ್ವಜನಿಕರಿಗೆ ಚುನಾವಣಾ ವಿಷಯಗಳ ಕು–ರಿತು ಯಾವುದೇ ಮಾಹಿತಿ ಅಥವಾ ದೂರುಗಳು ಇದ್ದಲ್ಲಿ ತಕ್ಷಣ ತಿಳಿಸಲು ಮತ್ತು ಚುನಾವಣಾ ವಿಷಯಗಳ ಮಾಹಿತಿ ಪಡೆಯಬಹುದಾಗಿದೆ. ಸಾರ್ವಜನಿಕರು ಚುನಾವಣಾ ವಿಷಯದ ಕುರಿತು 11–ಬೆಳಗಾವಿ ಉತ್ತರ ಮತ ಕ್ಷೇತ್ರ ಕಂಟ್ರೋಲ್ ರೂಂ ಸಂಖ್ಯೆ 0831–2405337, 12–ಬೆಳಗಾವಿ ದಕ್ಷಿಣ ಮತ ಕ್ಷೇತ್ರ 0831–2405316 ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಹಾಗೂ ದೂರುಗಳನ್ನು ಸಲ್ಲಿಸಬಹುದು ಎಂದು ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಒಣಕಾಲುವೆ ಬಳಿಯ ಸೇತುವೆ ಮತ್ತು ರಸ್ತೆ ಅಭಿವೃದ್ಧಿಗಾಗಿ ಪ್ರತಿಭಟನೆ



ಹುಳಿಯಾರು: ಪಟ್ಟಣದ ದೊಡ್ಡ ಒಣಕಾಲುವೆ ಬಳಿಯ ಸೇತುವೆ ಮತ್ತು ರಸ್ತೆಯನ್ನ ಕೂಡಲೆ ಸರಿಪಡಿಸುವಂತೆ ಒತ್ತಾಯಿಸಿ ಕರವೇ ಅಧ್ಯಕ್ಷ ಬೇಕರಿ ಪ್ರಕಾಶ್ ನೇತೃತ್ವದಲ್ಲಿ ಬುಧವಾರದಂದು ರಸ್ತೆತಡೆ ಪ್ರತಿಭನೆ ನಡೆಯಿತು.

ಹುಳಿಯಾರು ಬಸ್ ನಿಲ್ದಾಣದ ಕರವೇ ವೃತ್ತದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆಯು ಡಾ.ರಾಜ್‌ಕುಮಾರ್ ರಸ್ತೆ, ಪೊಲೀಸ್ ಠಾಣೆ ವೃತ್ತ, ಕನಕವೃತ್ತ ಮೂಲಕ ದೊಡ್ಡ ಒಣಕಾಲುವೆ ವರೆಗು ಸಾಗಿ–ತು ಮೆರವಣಿಗೆಯಲ್ಲಿ ಸರಕಾರದ ವಿರುದ್ಧ, ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ದಿಕ್ಕಾರ ಕೂಗಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಒಣಕಾಲುವೆ ಬಳಿ ಕೆಲವು ಸಮಯ ರಸ್ತೆ ತಡೆನಡೆಸಿ ಕೂಡಲೆ ಇಲ್ಲಿನ ಸೇತುವೆಯನ್ನ, ರಸ್ತೆಯನ್ನ ಅಭಿವೃದಿಪಡಿಸುವ ಮೂಲಕ ಸಾರ್ವಜನಿಕರ ಸುಗಮಸಂಚಾರಕ್ಕೆ ಅನುಕೂಲಕಲ್ಪಿಸಿಕೊಡುವಂತೆ ಒತ್ತಾಯಿಸಿದರು.

ಈ ವೇಳೆ ಕರವೇ ಅಧ್ಯಕ್ಷ ಬೇಕರಿ ಪ್ರಕಾಶ್ ಮಾತನಾಡಿ ಈ ರಸ್ತೆಯನ್ನ ಅಭಿವೃದ್ದಿಪಡಿಸುವುದಾಗಿ ಇಂಜಿನಿಯರ್ ಹಾಗು 234 ರಸ್ತೆ ನಿರ್ಮಾಣದ ಗುತ್ತಿಗೆದಾರರು ಚೆನ್ನಾಗಿದ್ದ ರಸ್ತೆ ಮತ್ತು ಸೇತುವೆಯನ್ನ ಕಿತ್ತು ವರ್ಷಗಳೆ ಕಳೆದರು ಸಹಾ ಇದುವರೆಗು ಸರಿಪಡಿಸುವ ಲಕ್ಷಣಗಳು ಕಾಣುತ್ತಿಲ್ಲಾ. ಪರಿಣಾಮ ಈ ರಸ್ತೆಯಲ್ಲಿ ದಿನನಿತ್ಯ ಸಾಕಷ್ಟು ಸಾರಿಗೆ ವಾಹನಗಳು, ತಿರುಗಾಡುವುದ–ರಿಂದ ರಸ್ತೆಯು ಮತ್ತೊಷ್ಟು ಅದಗೆಟ್ಟುಹೋಗಿದೆ. ಸಾರಿಗೆ ವಾಹನಗಳು ಸಂಚರಿಸುವಾಗ ಸಾಕಷ್ಟು ದೂಳು ಎದ್ದೇಳುವುದ–ರಿಂದ ದ್ವಿಚಕ್ರವಾಹನ ಸವಾರರು, ಪದಾಚಾರಿಗಳು ಭಯದಿಂದ ಸಂಚ–ರಿಸುವಂತ ಸ್ಥಿತಿ ನಿರ್ಮಾಣಗೊಂಡಿದೆ ಅಲ್ಲದೆ ಇಲ್ಲಿನ ಅಕ್ಕಪಕ್ಕದ ಮನೆಗಳಲ್ಲಿ ನಿವಾಸಿಗಳು ದಿನನಿತ್ಯ ದೂಳುಕುಡಿದು ನಾನಾ ರೋಗಗಳಿಗೆ ತುತ್ತಾಗುವಂತಾಗಿದೆ ಎಂದು ದೂರಿದರು.

ಈ ಬಗ್ಗೆ ಈಗಾಗಲೆ ಸಾಕಷ್ಟು ಬಾರಿ ಸಂಬಂದಪಟ್ಟ ಇಂಜಿನಿಯರ್, ಗುತ್ತಿಗೆದಾರರ ಗಮನಕ್ಕೆ ತಂದರು ಸಹಾ ಯಾವುದೆ ಪ್ರಯೋಜನವಾಗಿಲ್ಲಾ ಎಂದು ದೂರಿದರು.

ಈ ವೇಳೆ ಕರವೇ ಪದಾಧಿಕಾರಿಗಳಾದ ಚನ್ನಬಸವಯ್ಯ, ಲಕ್ಷ್ಮಿಕಾಂತ, ಕೋ–ರಿಯರ್ ಹರೀಶ್, ಮಂಜುನಾಥ್, ಗೌಡಿ, ಸಿದ್ದೇಶ್, ದೀವಾಕರ್, ಗಣೇಶ್, ಸಂತೋಷ್, ನಂದವಾಡಗಿ, ಹೊನ್ನಪ್ಪ, ಮೋಹನ್‌ಕುಮಾರ್, ಮೂರ್ತಿ, ಪರಪ್ಪ, ರಂಗಸ್ವಾಮಿ, ಹಾಜ–ರಿದ್ದರು.

ತಾತ್ಕಲಿಕವಾಗಿ ಪ್ರತಿಭಟನೆ ಸ್ಥಗಿ–ತ: ಪ್ರತಿಭಟನೆ ನಡೆಯುವ ವೇಳೆ ಕೇಂದ್ರಚುನಾವಣಾ ಆಯೋಗ 2023ರ ವಿಧಾನಸಭೆಯ ಚುನಾವಣೆಯ ದಿನಾಂಕವನ್ನ ಘೋಷಣೆಮಾಡಿದ ಪರಿಣಾಮ ರಸ್ತೆ ತಡೆಯನ್ನ ತಾತ್ಕಲಿಕವಾಗಿ ನಿಲ್ಲಿಸಿ ಚುನಾವಣೆಯ ನಂತರ ಪ್ರತಿಭಟನೆ ನಡೆಸುವುದಾಗಿ ಪ್ರತಿಭಟನಾ ನಿರತರು ತೀರ್ಮಾನಿಸಿದರು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089